ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 30 ಆಗಸ್ಟ್ 1, 1982 ಬೆಲೆ 60 ಪೈಸೆ

ಮುಂಬೈ ಟೆಕ್ಸ್‌ಟೈಲ್ಸ್ ಕಾರ್ಮಿಕರ ಬೆಂಬಲಾರ್ಥ ಸೌಹಾರ್ದ ಕಾರ್ಯಾಚರಣೆ

ಭೀಕರ ದಾಳಿ-ದಬ್ಬಾಳಿಕೆ ಎದುರಿಸಿ ಸುಮಾರು 7 ತಿಂಗಳಿಂದ ಹೋರಾಟದಲ್ಲಿರುವ ಮುಂಬೈನ ಎರಡೂವರೆ ಲಕ್ಷ ಹತ್ತಿ ಗಿರಣಿ ಕಾರ್ಮಿಕರನ್ನು ಬೆಂಗಳೂರಿನಲ್ಲಿ ನಡೆದ ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ಅಭಿನಂದಿಸಿದೆ.

ಆಗಸ್ಟ್ 12 ರಂದು ಮುಂಬೈ ಗಿರಣಿ ಕಾರ್ಮಿಕರ ಬೆಂಬಲಾರ್ಥ ಎಲ್ಲೆಡೆ ಮತಪ್ರದರ್ಶನ ನಡೆಸಬೇಕೆಂದು ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ಕರೆಕೊಟ್ಟಿದೆ.

ಜುಲೈ ೨೫ ರಂದು ಬೆಂಗಳೂರಿನಲ್ಲಿ ವರ್ಣರಂಜಿತ ಮೆರವಣಿಗೆ, ಭಾರೀ ಬಹಿರಂಗ ಸಭೆ

ಕರಾಳ ಶಾಸನಗಳ ವಿರುದ್ಧ ಐಕ್ಯ ಹೋರಾಟಕ್ಕೆ ಕರೆ

ಸಿ ಐ ಟಿ ಯು ಸ್ಥಾಪನೆಯಾದ ಮೇಲೆ ಪ್ರಥಮ ಬಾರಿಗೆ ಬೆಂಗಳೂರಿನಲ್ಲಿ (ಜುಲೈ 23 ರಿಂದ 25ರವರೆಗೆ) ಅಖಿಲ ಭಾರತ ಸಿ ಐ ಟಿ ಯು ಕಾರ್ಯಕಾರಿ ಸಮಿತಿ ಸಭೆ ಸೇರಿತ್ತು. ಜುಲೈ 25 ರಂದು ಬೆಂಗಳೂರಿನ ಶೇಷಾದ್ರಿಪುರಂ ನೆಹರೂ ಪಾರ್ಕಿನಲ್ಲಿ ಬೃಹತ್ ಬಹಿರಂಗ ಸಭೆ ಸೇರಿತ್ತು. ಸಭೆಯನ್ನುದ್ದೇಶಿಸಿ ಪ. ಬಂಗಾಲದ ಮುಖ್ಯಮಂತ್ರಿ ಸಿ ಐ ಟಿ ಯು ಉಪಾಧ್ಯಕ್ಷ ಕಾಂ| ಜ್ಯೋತಿ ಬಸು, ಸಿ ಐ ಟಿ ಯು ಅಧ್ಯಕ್ಷ ಕಾಂ| ಬಿ ಟಿ ರಣದಿವೆಯವರು ಮಾತನಾಡಿದರು. ಸಿ ಐ ಟಿ ಯು ರಾಜ್ಯ ಸಮಿತಿ ಅಧ್ಯಕ್ಷ ಕಾಂ| ಎಸ್. ಸೂರ್ಯನಾರಾಯಣರಾವ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.



ಕಾರ್ಯಕಾರಿ ಸಮಿತಿಯ ಅರಂಭದ ದಿನದಂದು (ಜುಲೈ 23) ಕೆಂಬಾವುಟವನ್ನು ಕಾಂ| ಬಿ. ಟಿ. ಆರ್ ಅರಳಿಸಿದರು.

ಜುಲೈ 25 ರಂದು ಮಧ್ಯಾಹ್ನ 3-30 ಘಂಟೆಗೆ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಮುಖ್ಯ ಮೆರವಣಿಗೆಯು ಪ್ರಾರಂಭವಾಯಿತು. ಮೆರವಣಿಗೆಯ ಮುಂಭಾಗದಲ್ಲಿ ಭಾರೀ ಬಾವುಟಗಳನ್ನು ಹಿಡಿದು ಇಬ್ಬರು ಸಂಗಾತಿಗಳು ನಡೆದಿದ್ದರು. ಅವರ ಹಿಂದೆ ಸುಮಾರು 500 ಜನ ಸ್ವಯಂ ಸೇವಕರು ಕೆಂಪು ಶರ್ಟು, ಖಾಕಿ ಪ್ಯಾಂಟಿನ ಸಮವಸ್ತ್ರ ತೊಟ್ಟು ಶಿಸ್ತುಬದ್ಧವಾಗಿ ನಡೆದಿದ್ದರು. ಅವರ ಹಿಂದೆ ನಗರದ ನಾನಾ ಭಾಗಗಳಿಂದ ಬಂದು ಸೇರಿದ ಸಾವಿರಾರು ಕಾರ್ಮಿಕ ಬಾಂಧವರು ನಡೆದಿದ್ದರು. ಇವರೊಟ್ಟಿಗೆ ಕೆ. ಜಿ. ಎಫ್. ನಿಂದ ಚಿನ್ನದ ಗಣಿ ಕಾರ್ಮಿಕರ ಪರವಾಗಿ 200 ಸ್ವಯಂ ಸೇವಕರು ಬಂದು ಸೇರಿದರು. ಈ ಮೆರವಣಿಗೆಯುಲ್ಲಿ ಕೃಷ್ಣರಾಜಪುರ, ವೈಟ್ ಫೀಲ್ಡ್, ಮೈಸೂರು ರೋಡು, ಎಚ್. ಎ. ಎಲ್. ಮುಂತಾದ ದೂರದ ಪ್ರದೇಶಗಳಿಂದ ಕಾರ್ಮಿಕರು ಆಗಮಿಸಿದ್ದರು. ಯಶವಂತಪುರ ವಿಭಾಗದಿಂದ ಹೊರಟ ಇನ್ನೊಂದು ಮೆರವಣಿಗೆ ಮಲ್ಲೇಶ್ವರಂ ಮಾರ್ಗವಾಗಿ ನೆಹರೂ ಪಾರ್ಕ್ ತಲುಪಿತು. ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಹೊರಟ ಮೆರವಣಿಗೆ ನಗರದ ಮುಖ್ಯ ಬೀದಿಗಳಲ್ಲಿ ನಡೆದು ಸಾಯಂಕಾಲ 6 ಘಂಟೆಗೆ ಶೇಷಾದ್ರಿಪುರಂನ ನೆಹರೂ ಪಾರ್ಕ್ ತಲುಪಿತು.

ಆರಂಭದಲ್ಲಿ ರಾಜ್ಯ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ| ಸಿ. ನಂಜುಂಡಪ್ಪನವರು ಸ್ವಾಗತ ಭಾಷಣ ಮಾಡುತ್ತಾ ಕಾರ್ಯಕಾರಿ ಸಮಿತಿಯ ಸಭೆಗೆ ಬೆಂಗಳೂರನ್ನು ಆಯ್ಕೆ ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು. ಸಭೆಗೆ ಆಗಮಿಸಿದ್ದ ಸಿ. ಐ. ಟಿ. ಯು. ಅಧ್ಯಕ್ಷ ಕಾಂ| ಬಿ. ಟಿ. ರಣದಿವೆ, ಉಪಾಧ್ಯಕ್ಷ ಹಾಗೂ ಪ. ಬಂಗಾಲ ಮುಖ್ಯ ಮಂತ್ರಿ ಕಾಂ| ಜ್ಯೋತಿ ಬಸು, ಪ್ರಧಾನ ಕಾರ್ಯದರ್ಶಿ ಕಾಂ| ಪಿ. ರಾಮಮೂರ್ತಿ (ಎಂ.ಪಿ.), ಪ. ಬಂಗಾಲ ಸಾರಿಗೆ ಸಚಿವ ಕಾಂ| ರೊಬಿನ್ ಮುಖರ್ಜಿ, ಅರಣ್ಯ ಸಚಿವ ಕಾಂ| ಪರಿಮಳ ಮಿತ್ರ, ಹಣಕಾಸು ರಾಜ್ಯ ಸಚಿವ ಕಾಂ| ಕ್ರಾಂತಿ ರಂಜನ್ ಘಟಕ, ತ್ರಿಪುರಾದ ಕಂದಾಯ ಸಚಿವ ಕಾಂ| ಬಿರೇನ್ ದತ್ತಾ, ಕಾರ್ಮಿಕ ಮುಖಂಡರೂ, ಸಂಸತ್ ಸದಸ್ಯರೂ ಆದ ಕಾಂ| ಆನಂದ್ ಪಾಠಕ್, ಸಂಗ್‌ದೋ ಪಾಲ್ ಲೇಪ್ಚ ಇವರುಗಳನ್ನು ಕಾಂ| ಸಿ. ಎನ್. ಸ್ವಾಗತಿಸಿದರು.

ದೇಶದಲ್ಲಿ ಅಲೆಅಲೆಯಾಗಿ ಉಕ್ಕಿ ಬರುತ್ತಿರುವ ಸರ್ವಾಧಿಕಾರದ ವಿರುದ್ಧ, ಕಾರ್ಮಿಕ ವರ್ಗದ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧ, ಕಾರ್ಮಿಕರ ಹಕ್ಕುಗಳಿಗಾಗಿ, ಹಿತರಕ್ಷಣೆಗಾಗಿ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ನಾಗರೀಕ ಸ್ವಾತಂತ್ರ್ಯದ ರಕ್ಷಣೆಗಾಗಿ, ದೇಶದ ಸಮಗ್ರತೆ ಮತ್ತು ಸಾರ್ವಭೌಮತೆಗಳ ರಕ್ಷಣೆಗಾಗಿ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ, ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಹೋರಾಡುತ್ತಿರುವ ಧೀರ ಯೋಧರನ್ನು ಸಭೆಗೆ ಕಾಂ| ಸಿ. ಎನ್. ಸ್ವಾಗತಿಸಿದರು.

ಕಾಂ| ಸಿ. ಎನ್. ಮುಂದುವರಿದು ಕಳೆದ 3 ವರ್ಷಗಳಿಂದೀಚೆ ರಾಜ್ಯದ ರೈತ ಕಾರ್ಮಿಕರ ಮತ್ತಿತರ ದುಡಿಯುವ ವರ್ಗದ ಹೋರಾಟಗಳು ಶೀಘ್ರ

(8ನೇ ಪುಟನೋಡಿ)



ಬಹಿರಂಗ ಸಭೆಗೆ ಆಗಮಿಸಿದ ಕಾಂ| ಜ್ಯೋತಿಬಸು ಅವರಿಗೆ ಸಂಭ್ರಮದ ಸ್ವಾಗತ. ಪಕ್ಕದಲ್ಲಿರುವವರು ಸಿ.ಪಿ.ಐ. (ಎಂ) ರಾಜ್ಯ ಕಾರ್ಯದರ್ಶಿ ಕಾಂ| ಎಂ. ಕೆ. ಭಟ್.

ಕರ್ನಾಟಕ ರಾಜ್ಯದಲ್ಲಿ

ನಗರಸಭೆಗಳ ದುಸ್ಥಿತಿ

—ಎನ್ಕೆ

ರಾಜ್ಯದಲ್ಲಿ ನಗರಸಭೆಗಳ ಪರಿಸ್ಥಿತಿ ಬಹಳ ಹದಗೆಟ್ಟಿದೆ. ನಗರ ಸಭೆಗಳ ಹದ್ದಿಯೊಳಗೆ ಮೂರು ಪ್ರತ್ಯೇಕ ಅಧಿಕಾರಗಳು ಜ್ಯಾರಿಯಲ್ಲಿವೆ. ನಗರಸಭೆಯ ಕಾನೂನು, ನಗರ ಅಥವಾ ಟೌನ್ ಪ್ಲಾನಿಂಗ್ ಕಮಿಟಿಯ ಕಾನೂನು ಹಾಗೆಯೇ ಸರಕಾರದ ಕಾನೂನುಗಳು. ಇಂಥ ಪರಿಸ್ಥಿತಿಗಳನ್ನು ವಿಚಾರ ಮಾಡಿ, ವರದಿ ಸಲ್ಲಿಸಲು ವಿಧಾನ ಸಭಾ ಸದಸ್ಯರ ಅಥವಾ ಸರಕಾರಿ ಅಧಿಕಾರಿಗಳ ಒಂದು ಕಮಿಟಿಯನ್ನು ನೇಮಿಸಬೇಕೆಂಬ ಸಲಹೆಯನ್ನು ವಿರೋಧಿ ಪಕ್ಷದ ಮುಖಂಡ ಎಂ. ಸಿ. ಪೆರುಮಾಳ್ ಅವರು ವಿಧಾನ ಪರಿಷತ್ತಿನಲ್ಲಿ ಸೂಚಿಸಿದರು. ಇವರು ನಗರಸಭೆ ಆಡಳಿತೆಗಾಗಿ ಮಂಜೂರು ಮಾಡಬೇಕಾದ ಅಂದಾಜು ಪತ್ರಿಕೆಯ ಮೇಲೆ ಭಾಷಣ ಮಾಡುತ್ತಿದ್ದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಪ. ಬಂಗಾಲ ಸರಕಾರ 1977ರಲ್ಲಿ ಅಧಿಕಾರ ಸ್ವೀಕಾರ ಮಾಡಿದ ಕೆಲವೇ ತಿಂಗಳಲ್ಲಿ ಪಂಚಾಯಿತಿ, ನಗರಸಭೆಗಳ ಚುನಾವಣೆ ನಡೆಸಿ, ಅಧಿಕಾರ ವಿಕೇಂದ್ರೀಕರಣಗೊಳಿಸಿತ್ತು. ಆ ಮುಂಚೆ 16 ವರ್ಷಗಳಿಂದಲೂ ಕಾಂಗ್ರೆಸು ಅಧಿಕಾರ ನಡೆಸುತ್ತಿದ್ದರೂ ಚುನಾವಣೆ ಮಾಡದೆ, ಅಧಿಕಾರವನ್ನೆಲ್ಲ ಕೇಂದ್ರೀಕರಿಸಿತ್ತು.

ಕರ್ನಾಟಕದಲ್ಲಿ ಕೂಡ ಗುಂಡೂರಾವ್ ಸರಕಾರ ನಮ್ಮ ರಾಜ್ಯದ ನಗರ ಸಭೆಗಳ ಚುನಾವಣೆ ನಡೆಸುತ್ತಿಲ್ಲ. ಬರೇ ಆಶ್ವಾಸನೆಗಳನ್ನಷ್ಟೇ ನೀಡುತ್ತಿದೆ.

ಚುನಾಯಿತ ಸದಸ್ಯರಿಂದ ನಡೆಸಲ್ಪಡುವ, ಹಾಗೆಯೇ ಸರಕಾರಿ ಅಧಿಕಾರಿಗಳೇ ನಡೆಸುತ್ತಿರುವ ಎಲ್ಲ ನಗರಸಭೆಗಳು ನಾಗರೀಕರ ಅವಶ್ಯಕತೆಗಳನ್ನು ಪೂರೈಸುತ್ತಿಲ್ಲ. ಭ್ರಷ್ಟಾಚಾರ, ದುರಾಡಳಿತೆಗಳಿಂದ ತುಂಬಿ ತುಳುಕುತ್ತಿದೆ. ಇದನ್ನೆಲ್ಲ ಸುಧಾರಿಸಬೇಕಾದರೆ ಜನ ಜಾಗ್ರತರಾಗಬೇಕು. ಬರೇ ವಿಧಾನ ಸಭೆ ಸದಸ್ಯರ ಅಥವಾ ಸರಕಾರಿ ಅಧಿಕಾರಿಗಳ ಕಮಿಟಿ ನೇಮಿಸುವುದರಿಂದ ನಗರಸಭೆಗಳೆದುರಿಸುತ್ತಿರುವ ಸಮಸ್ಯೆಗಳನ್ನಾಗಲೀ, ನಾಗರೀಕರ ಕುಂದು ಕೊರತೆಗಳನ್ನಾಗಲೀ ಪಿವಾರಿಸಲು ಶಕ್ಯವಿಲ್ಲ. ಈ ವಿಷಯಗಳ ಕುರಿತು ಮುಂಬಯಿ ಸರಕಾರ ಹಾಗೆಯೇ ಕರ್ನಾಟಕ ಸರಕಾರ ಹಲವಾರು ವರದಿಗಳನ್ನು ಈ ಮುಂಚೆಯೇ ಪ್ರಕಟಿಸಿವೆ. ಆ ವರದಿಗಳ ಸಲಹೆಗಳನ್ನು ಅಭ್ಯಾಸ ಮಾಡಿ ಅವುಗಳನ್ನು ಜ್ಯಾರಿಯಲ್ಲಿ ತರುವುದೇ ಮುಖ್ಯ ಕರ್ತವ್ಯ. ನಗರ ಸಭೆಗಳ ಆದಾಯ ಹೆಚ್ಚಿಸುವುದು. ತಪ್ಪಿತಸ್ಥ ಅಧಿಕಾರಿ, ಸದಸ್ಯರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುವುದು, ನಗರಸಭೆಗಳಿಗೆ ಹೆಚ್ಚಿನ ಅಧಿಕಾರ ಕೊಡಿಸುವುದು, ಇಂಥ ವಿಷಯಗಳ ಕುರಿತು ದೃಢ ನಿರ್ಧಾರ ಅತ್ಯಗತ್ಯ.

ದಿವಾಳಿಖೋರ ದಾರಿ

ಕರ್ನಾಟಕ ಸರಕಾರ ದಿವಾಳಿಖೋರ ದಾರಿಯಲ್ಲಿ ನಡೆದಿದೆಯೆಂದೂ, ಭ್ರಷ್ಟ ರಾಜಕಾರಣಿಗಳೂ, ಕಂಟ್ರಾಕ್ಟರರೂ ಮತ್ತು ಅಧಿಕಾರಿಗಳು ಸರಕಾರಕ್ಕೆ ಸರಿ ಸಮಾನವಾದ ಮತ್ತೊಂದು ಆರ್ಥಿಕ ಆಡಳಿತೆಯನ್ನೇ ನಡೆಸುತ್ತಿದ್ದಾರೆಂದು ಜನತಾ ಪಾರ್ಟಿಯ ಮುಖಂಡ ಎಸ್. ಆರ್. ಬೊಮ್ಮಾಯಿಯವರು ವಿಧಾನ ಸಭೆಯಲ್ಲಿ ಆರೋಪಿಸಿದರು.

1980–81ರಲ್ಲಿ ರಾಜ್ಯ ಸರಕಾರ ರಿಸರ್ವ್ ಬ್ಯಾಂಕಿನಿಂದ ರೂ. 434 ಕೋಟಿ ಹೆಚ್ಚಿಗೆ ಸಾಲ ರೂಪದಲ್ಲಿ ಹಣ ಪಡೆದು ಅದಕ್ಕೆ ರೂ. 1.56 ಲಕ್ಷ ಬಡ್ಡಿ ಕೊಟ್ಟಿದೆಂದೂ ಆರೋಪ ಹೊರಿಸಿ, ರಾಜ್ಯದ ಆರ್ಥಿಕ ಪರಿಸ್ಥಿತಿ ಭದ್ರವಾಗಿದೆಂಬ ಗುಂಡೂರಾವ್ ಸರಕಾರದ ವಾದಕ್ಕೆ ಸವಾಲೊಡ್ಡಿದ್ದಾರೆ ಬೊಮ್ಮಾಯಿಯವರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದಲ್ಲಿರುವ ಪ. ಬಂಗಾಲವೇ ಅತಿ ಹೆಚ್ಚು ಸಾಲ ಪಡೆದಿದೆಂಬ ಕೇಂದ್ರ ಸರಕಾರದ ಆರ್ಥಿಕ ಮಂತ್ರಿ ಪ್ರಣವ್ ಮುಖರ್ಜಿಯವರ ವಾದವನ್ನು ಬೊಮ್ಮಾಯಿಯವರ ಹೇಳಿಕೆ ಪುಡಿ ಪುಡಿ ಮಾಡಿದೆ. ಆರ್ಥಿಕ ದೃಷ್ಟಿಯಲ್ಲಿ ಜ್ಯೋತಿಬಸುರವರ ಪ. ಬಂಗಾಲ ಸರಕಾರ ಸಂಪೂರ್ಣ ಕುಸಿದು ಬಿದ್ದಿದೆ, ದೇಶದಲ್ಲೇ ಅತಿ ಹೆಚ್ಚು ಸಾಲ ಪಡೆದಿರುವ ಸರಕಾರ ಅದೊಂದೇ ಎಂದು ಅಪಪ್ರಚಾರ ಮಾಡುತ್ತಿರುವ ಕಾಂಗ್ರೆ ಮಂತ್ರಿಗಳು ತಮ್ಮ ಪಕ್ಷದವರಿಂದಲೇ ಆಳಲ್ಪಡುತ್ತಿರುವ ಕರ್ನಾಟಕ, ರಾಜಸ್ಥಾನ ಸರಕಾರಗಳ ಸಾಲದ ಕುರಿತು ಚಕಾರ ಶಬ್ದ ಎತ್ತದಿರುವುದಕ್ಕೆ ಅರ್ಥವೂ ಇದೆಯೆಂಬುದನ್ನು ಜನರು ತಿಳಿದುಕೊಳ್ಳುವುದಗತ್ಯ.

ಕರ್ನಾಟಕ ಸರಕಾರ ದಿವಾಳಿಖೋರ ದಾರಿಯಲ್ಲಿ ನಡೆದಿದೆಂದು ವಿರೋಧ ಪಕ್ಷದವರು ಆರೋಪಿಸುತ್ತಿದ್ದಂತೆಯೇ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಹಣ ಪೂರೈಸುವಲ್ಲಿ ರಾಜ್ಯ ಸರಕಾರ ಹಿಂದೆ ಬಿದ್ದಿದ್ದರೂ ಕೂಡ, ಹೆಲಿಕಾಪ್ಟರಿನಲ್ಲಿ ತಿರುಗಾಡಲಿಕ್ಕಾಗಲೀ, ಮಂತ್ರಿಗಳ ಮನೆ ರಿಪೇರಿ, ಹೊಸ ಆಸನಗಳ ಖರೀದಿ ಹಾಗೂ ಇತರ ಖರ್ಚುಗಳಿಗಾಗಿಯಾಗಲೀ ಹಣದ ತೊಂದರೆಯಿಲ್ಲೆಂಬುದನ್ನು ಇತ್ತೀಚೆಗೆ ಸರಕಾರ ಪ್ರಕಟಿಸಿದ ಅಂಕೆಗಳಿಂದಲೇ ಗೊತ್ತಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯಾಗಲೀ, ಅಥವಾ ಕಾಳಿ ವಿದ್ಯುತ್ ಯೋಜನೆಯಾಗಲೀ ಅಥವಾ ರಾಜ್ಯದ ಇತರ ಯೋಜನೆಗಳ ಕಾರ್ಯ ಮುಗಿಸಲಿಕ್ಕೆ ಅಡ್ಡಿಯಾಗಿರುವುದು ಹಣವೇ ಮುಖ್ಯ ಕಾರಣವಾಗಿದೆಂಬುದನ್ನು ಸರಕಾರ ಒಪ್ಪಿಕೊಂಡಿದ್ದರೂ ತಾವು ದಿವಾಳಿಖೋರ ದಾರಿಯಲ್ಲಿ ಹೊರಟಿದ್ದೇವೆಂಬುದನ್ನು ಮಾತ್ರ ಸರಕಾರ ಒಪ್ಪುತ್ತಿಲ್ಲ. ಯಾಕೆಂದರೆ, ರಾಜ್ಯದ ಹಲವಾರು ಯೋಜನೆಗಳಿಗೆ ಕೇಂದ್ರ ಸರಕಾರ ಕೊಟ್ಟಿರುವ ಸಹಾಯಧನವನ್ನು ರಾಜ್ಯ ಸರಕಾರ ಪೂರ್ಣ ವಿನಿಯೋಗಿಸಿರುವುದಿಲ್ಲೆಂದು ಕೇಂದ್ರದ ಮಂತ್ರಿ ಆರೋಪಿಸಿದ್ದಾರೆ. ಕಾರಣ ಕೇಂದ್ರದಲ್ಲಿ ಅಮ್ಮಾವ್ರ ಸರಕಾರದ ಆಶೀರ್ವಾದ ಇರುವತನಕ ನಮ್ಮ ಸರಕಾರ ದಿವಾಳಿಖೋರ ಆಗುವುದಿಲ್ಲೆಂಬ ವಿಷಯ ಬೊಮ್ಮಾಯಿಯವರಿಗೆ ತಿಳಿದಿರಲಿಕ್ಕಿಲ್ಲವಷ್ಟೇ.

ಬಡತನ ಅಲಕ್ಷಿಸಿದರೆ ದೇಶಕ್ಕೆ ಗಂಡಾತರ

“ಬಡತನವನ್ನು ಅಧಿಕಾರಿಗಳು ವಿಶಾಲ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಂಡು ಬಡತನದ ವಿರುದ್ಧದ ಕಾರ್ಯಕ್ರಮದಲ್ಲಿ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳದಿದ್ದರೆ ಬಡತನವು ದೇಶವನ್ನೇ ನುಂಗುವ ಅಪಾಯವಿದೆಯೆಂದು” ಯೋಜನಾ ಆಯೋಗದ ಮಾಜಿ ಸದಸ್ಯ ಡಾ. ವಿ. ಕೆ. ಆರ್. ವಿ. ರಾವ್ ಅವರು ಎಚ್ಚರಿಕೆ ನೀಡಿದ್ದಾರೆ. ಆಡಳಿತ ತರಬೇತಿ ಸಂಸ್ಥೆಯು ವತಿಯಿಂದ ನಡೆಸಲ್ಪಡುವ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನುದ್ದೇಶಿಸಿ ಮೈಸೂರಿನಲ್ಲಿ ಇತ್ತೀಚೆಗೆ ಮಾತಾಡುತ್ತಿದ್ದರು. ಕರ್ನಾಟಕ ರಾಜ್ಯದಲ್ಲಿ ಬಡತನದ ರೇಖೆಗಿಂತ ಕೆಳಗೆ ಬದುಕುತ್ತಿರುವವರ ಸಂಖ್ಯೆ ಶೇ. 50ರಷ್ಟಿದೆ. ಈ ಲಕ್ಷಾಂತರ ಜನರ ಬಗ್ಗೆ ಎಚ್ಚರ ವಹಿಸದಿದ್ದರೆ, ಬಿಹಾರದಂತ ಪರಿಸ್ಥಿತಿಯನ್ನು ನಮ್ಮ ರಾಜ್ಯದಲ್ಲೂ ಎದುರಿಸಬೇಕಾದೀತೆಂದೂ ಡಾ| ರಾವ್ ಎಚ್ಚರಿಸಿ, “ಅಭಿವೃದ್ಧಿ ಕಾರ್ಯಕ್ರಮಗಳು ದುರದೃಷ್ಟವಶಾತ್ ಆಸ್ತಿಯುಳ್ಳವರಪಾಲಿಗೆ ಹೋಗಿದೆಯೆಂದೂ” ಹೇಳಿದರು.

ನಾವು ಬಂಡವಾಳಶಾಹಿ ಭೂಮಾಲಿಕ ವರ್ಗವನ್ನು ಪ್ರತಿನಿಧೀಕರಿಸುವ ಇಂದಿರಾ ಕಾಂಗ್ರೆಸ್ ಆಡಳಿತೆಗೊಳಪಟ್ಟಿದ್ದೇವೆ. ಈ ಸರಕಾರ ಗುತ್ತೇದಾರಿ ಬಂಡವಾಳದಾರರ ದೊಡ್ಡ ಭೂಮಾಲಿಕ ಹಿತವನ್ನಷ್ಟೆ ಮಾಡಿ ಬಡ ರೈತರನ್ನೂ, ಕೃಷಿಕೂಲಿಗಾರರನ್ನೂ, ಗ್ರಾಮಾಂತರ ಪ್ರದೇಶಗಳ ಬಡ ಜನತೆಯನ್ನೂ ಕಡೆಗಣಿಸುತ್ತಿದೆ. ಸರಕಾರ ಖರ್ಚು ಮಾಡುತ್ತಿರುವ ಹಣದ ಒಂದಂಶವೂ ಈಕೆಳವರ್ಗದ ಜನರಿಗೆ ಎಟುಕುವುದಿಲ್ಲ. ಕಾರಣ ಈ ಕಾಂಗ್ರೆಯ ಬಂಡವಾಳಶಾಹಿ ಸರಕಾರ ಹೋಗದೆ, ಯೋಜನೆಗಳಿಗಾಗಿ, ಅಭಿವೃದ್ಧಿ ಕಾರ್ಯಗಳಿಗಾಗಿ ವರ್ಷಾ ವರ್ಷಾ ಖರ್ಚುಮಾಡುತ್ತಿರುವ ಹಣ ಮೇಲ್ವರ್ಗದ ಸಿರಿವಂತ ಜನರಿಗಾಗಿಯೇ, ಕಾರ್ಮಿಕರನ್ನು ದುಡಿಸಿ ಲಾಭಗಳಿಸುವ ಕಾರ್ಖಾನೆ ಮಾಲೀಕರುಗಳಿಗಾಗಿಯೇ, ಕಂಟ್ರಾಕ್ಟರ್, ಅಧಿಕಾರಿಗಳು, ಮಂತ್ರಿಗಳಿಗಾಗಿಯೇ ಹೆಚ್ಚಿನ ಪಾಲು ವಿನಿಯೋಗಿಸಲ್ಪಡುತ್ತಿದೆಯೆಂಬ ಸಂಗತಿ ಸರಕಾರದಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿರುವ ಡಾ|ರಾವ್ ಅವರಿಗೆ ತಿಳಿದಿರಲು ಸಾಕು. ದೇಶದಲ್ಲಿ ಎಂಥ ಗಂಭೀರ ಬಡತನವಿದ್ದರೂ ಕೂಡ ತನ್ನ ಗರೀಬಿ ಹಟಾವೊ, 20 ಅಂಶಗಳ ಕಾರ್ಯಕ್ರಮಗಳ ಮೂಲಕ ಬಡವರಲ್ಲಿ ಭ್ರಮೆಯನ್ನುಂಟುಮಾಡಿ ಬೆಂಬಲ ಗಿಟ್ಟಿಸುತ್ತೇನೆಂಬ ಧೈರ್ಯ ಇಂದಿರಾ ಗಾಂಧಿಗಿರುವತನಕ ಕರ್ನಾಟಕ ಬಿಹಾರದ ದಾರಿ ತುಳಿಯಲಿಕ್ಕಿಲ್ಲ. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹಾಗೂ ಇತರ ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಜನಜಾಗ್ರತಿಮಾಡಿ, ಹೋರಾಟ ಮಾಡಿದ್ದೇ ಆದರೆ ಕರ್ನಾಟಕ ಬೀಹಾರಿನ ದಾರಿಯಲ್ಲಿಲ್ಲ, ಪ. ಬಂಗಾಲ, ತ್ರಿಪುರಾಗಳ ದಾರಿಯಲ್ಲಿ ಮುನ್ನುಗ್ಗಿ ಸಮಾಜದಲ್ಲಿ ಮೂಲಭೂತ ಬದಲಾವಣೆ ತರಲು ಸಾಧ್ಯವಾಗಬಹುದು. ಆ ದಾರಿಯಲ್ಲಿ ಮುನ್ನುಗ್ಗುವ ಕೆಲಸ ಮಾಡೋಣ.

ಸಂಪುಟ ವಿಸ್ತರಣೆ

ಕಳೆದ ಒಂದು ವರ್ಷದಿಂದಲೂ ವಿಧಾನ ಸಭೆಗೆ ಚುನಾವಣೆ ಹಾಗೂ ಸಂಪುಟದ ವಿಸ್ತರಣೆಯ ಸುದ್ದಿಗಳನ್ನು ಕೇಳುತ್ತಲೇ ಇದ್ದೇವೆ. ಆದರೆ ಚುನಾವಣೆಯೂ ನಡೆಯಲಿಲ್ಲ, ಮಂತ್ರಿ ಮಂಡಲದ ವಿಸ್ತರಣೆಯೂ ಆಗಲಿಲ್ಲ. ಗುಂಡೂರಾಯರು ಜೂನ್ ತಿಂಗಳಲ್ಲಿ ದಿಲ್ಲಿಯಿಂದ ವಾಪಸ್ಸಾದನಂತರ ಇದೇ ವರ್ಷ ನವಂಬರ್ ತಿಂಗಳಲ್ಲಿ ಚುನಾವಣೆ ನಡೆಯಬಹುದೆಂಬ ಹೇಳಿಕೆಯನ್ನಿತ್ತು, ಜಿಲ್ಲಾ ಕಮಿಟಿಗಳ ಸಭೆ ಕರೆದು ಚುನಾವಣೆಯ ತಯಾರಿಗೆ ಕರೆ ಕೊಟ್ಟಿದ್ದರು. ಇಂದಿರಾ ಗಾಂಧಿಯ ಅಮೇರಿಕ ಪ್ರಯಾಣದ ಜೊತೆಯಲ್ಲೇ ರಾಜ್ಯದಲ್ಲಿ ಚುನಾವಣೆ ಮುಂದಿನ ವರ್ಷ ಫೆಬ್ರವರಿಯಲ್ಲೇ ನಡೆಯುತ್ತದೆಂದು ಹೇಳಿದ್ದಾರಲ್ಲದೆ, ಶೀಘ್ರವೇ ಮಂತ್ರಿ ಮಂಡಲದ ವಿಸ್ತರಣೆ ಮಾಡಲಾಗುವದೆಂಬ ಸುದ್ದಿಯನ್ನೂ ಹರಡಿದ್ದಾರೆ. ಇನ್ನು 7 ತಿಂಗಳಲ್ಲೇ ಚುನಾವಣೆ ನಡೆಯುತ್ತಿರುವಾಗ ಮಂತ್ರಿ ಮಂಡಲ ವಿಸ್ತರಣೆಯ ಅವಶ್ಯಕತೆಯಾದರೂ ಏನಿದೆಂದು ನೀವು ಕೇಳುವುದು ಸಹಜವಲ್ಲವೇ ? ಗುಂಡೂರಾಯರ ಉತ್ತರವೂ ಸಹಜವಾಗಿಯೇ ಹೊರಬೀಳಬಹುದಲ್ಲ. ಕಾಂಗ್ರೆನಿಂದ ಬಂಗಾರಪ್ಪನವರ ನಿರ್ಗಮನ. ಕ್ರಾಂತಿ ರಂಗದಲ್ಲಿ ಸೇರ್ಪಡೆ. ಕಾಂಗ್ರೆನಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ ಸರಿಯಾದ ಸ್ಥಾನ ಸಿಗುತ್ತಿಲ್ಲೆಂಬ ಆರೋಪಗಳು. ಇದರಿಂದಾಗಿ ಬಹಳಷ್ಟು ಕಾರ್ಯಕರ್ತರು ಕಾಂಗ್ರೆ ಬಿಟ್ಟು ಬಂಗಾರಪ್ಪನ ಬೆನ್ನು ಹತ್ತಬಹುದೆಂಬ ಭೀತಿ. ರಾಠೋಡ ಮತ್ತು ಅವರ ಬೆಂಬಲಿಗರಿಂದ ಗುಂಡೂರಾಯರ ವಿರುದ್ಧ

(8ನೇ ಪುಟ ನೋಡಿ)

ಕತ್ತಲೆ ರಾಜ್ಯದ ಇಂಜಿನ್ ಹಾಡು

ಕತ್ತಲೆ ರಾಜ್ಯದ
ಚಿತ್ತಲೆ ರಾಜನ
ದಿಕ್ಕೆಟ್ಟು ಓಡುವ
ಇಂಜಿನ್ನು

ಪ್ರಜೆಗಳ ಪ್ರಾಣವ
ಎಳೆಯುವ ಇಂಜಿನ್
ದುರಂತ ಸಾರಿ
ಹೇಳುವ ಇಂಜಿನ್

ದುರಂತ ಒಂದು
ಸುಟ್ಟ ಸರ್ಕಸ್

ನಲಿಯಲು ಹೋಯಿತು
ಮಕ್ಕಳ ದಂಡು
ನಕ್ಕಿತು ಕುಣಿಯಿತು
ನಕಲಿಯ ಕಂಡು

ಹತ್ತಿತು ಸರ್ಕಸ್
ಬತ್ತಿದೊ ಮನಸು

ಮುಗಿಲನು ಮುಟ್ಟಿತು
ಚೀರಾಟ
ಜೊತೆಯಲ್ಲಿ ನೋವಿನ
ನರಳಾಟ

ಹಬ್ಬಿತು ಸುದ್ದಿ
ಅಲೆ ಅಲೆಯಾಗಿ
ಸೇರಿತು ಜನ
ಕಡ ಕಡಲಾಗಿ

ಅಳಿದವು ಮಕ್ಕಳು
ಉಳಿದವು ಮೂಳೆ
ಸರ್ಕಸ್ ಸುಟ್ಟಿತು
ಕಿಚ್ಚನು ಹಚ್ಚಿತು
॥ ಕತ್ತಲೆ ರಾಜ್ಯದ ॥

ದುರಂತ ಎರಡು
ಕಳ್ಳ ಭಟ್ಟಿ

ಕುಡಿದರು ಭಟ್ಟಿಯ
ಮರೆಯಲು ನೋವನು
ಕರಳನು ಸುಟ್ಟಿತು
ನುಂಗಿತು ಸಾವು

ಹೆಣಗಳು ಬಿದ್ದವು
ಎಲ್ಲೆಲ್ಲು

ಪ್ರಭುಗಳು ಕೊಟ್ಟರು
ಸಾವಿರ ಸಾವಿರ
ಪ್ರಜೆಗಳ ಪ್ರಾಣಕೆ
ರೂಪಾಯಿ ಸಾವಿರ

ಮೆರೆದನು ಭಟ್ಟಿಯ
ಸರದಾರ
ಅವನದೆ ಅಲ್ಲವೆ
ಸರಕಾರ

—ಜನಕರಾಜ್

[ಡಿ. ವೈ. ಎಫ್. ಐ. ನಾಟಕ ತಂಡ ಅಭಿನಯಿಸುತ್ತಿರುವ ‘ಕತ್ತಲೆ ರಾಜ್ಯ’ ನಾಟಕದ ಹಾಡು]

ರೈತ ಸಂಘದ ಚಟುವಟಿಕೆಗಳು

ಪುತ್ತೂರು :

ಪುತ್ತೂರು ತಾಲ್ಲೂಕಿನಲ್ಲಿ ಬಡಗನೂರು ಎಂಬ ಗ್ರಾಮವಿದೆ. ಈ ಗ್ರಾಮದ 46ನೇ ಸರ್ವೆ ಕ್ರಮಾಂಕದ ಭೂಮಿಗೆ ಜೋಮ ಎಂಬಾತ 1975 ರಲ್ಲಿ ದರ್ಖಾಸ್ತು ಅರ್ಜಿ ಹಾಕಿದ್ದ. ಈ ಸ. ನಂ. ಭೂಮಿ ಒಟ್ಟು 62 ಎಕರೆಗಳಿಗಿಂತಲೂ ಹೆಚ್ಚು ವಿಸ್ತಾರದಲ್ಲಿದ್ದು ಜೋಮ ಕೇವಲ 50 ಸೇಂಟ್ಸ್ ಭೂಮಿಗೆ ಅರ್ಜಿ ಹಾಕಿದ್ದ. ಮತ್ತು ಅಲ್ಲಿಯೇ ವಾಸ್ತವ್ಯ ಇರಲು ಆರಂಭಿಸಿದ. ಇದು ಊರ ಪುಡಾರಿಗಳ ಕಣ್ಣನ್ನು ಕೆಂಪಾಗಿಸಿತು. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಕೆಲವು ಭೂಮಾಲೀಕರು ಸೇರಿ ಈ ಬಡ ಹರಿಜನನ ಮನೆಯನ್ನು ಮುರಿದು ಹಾಕಿದರು. ಕಾರಣವೇನು ಗೊತ್ತೆ ? ಜೋಮ ಊಳುತ್ತಿದ್ದ ಜಮೀನು 'ವನ ಮಹೋತ್ಸವದ' ಅಂಗವಾಗಿ ಕಾಡು ಬೆಳೆಸಲೋಸುಗ ಮೀಸಲಾಗಿಟ್ಟಿರುವದೆಂದು.

ಬಡವರ ಎದೆಯ ಮೇಲೆ ಮರ ನೆಡುವ ಕಾರ್ಯಕ್ರಮದ ವಿರುದ್ಧ ಬಡಗನೂರಿನ ಬಡರೈತರು ರೈತ ಸಂಘದ ನೇತೃತ್ವದಲ್ಲಿ ಸಂಘಟಿತರಾದರು. 6-7-82 ರಂದು ರೈತ ಸಂಘದ ಕಾರ್ಯದರ್ಶಿ ಕಾಂ॥ ವಿಲ್ಫ್ರೆಡ್ ಡಿಸೋಜರ ನೇತೃತ್ವದಲ್ಲಿ ಪಂಚಾಯತ್‌ನ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಈ ಸರದಿ ಧರಣಿ ಸತ್ಯಾಗ್ರಹವನ್ನು ಸ್ವಾತಂತ್ರ್ಯ ಹೋರಾಟಗಾರ ಪರಮೇಶ್ವರ ನಂಬೀಶನ್ ಉದ್ಘಾಟಿಸಿದರು. ಸತ್ಯಾಗ್ರಹ 15 ದಿನಗಳ ಕಾಲ ಸತತವಾಗಿ ನಡೆಯಿತು. ತಾಲ್ಲೂಕ್ ತಹಶೀಲ್ದಾರರು ಸತ್ಯಾಗ್ರಹದ ಸ್ಥಳಕ್ಕೆ ಎರಡು ಬಾರಿ ಭೇಟಿ ನೀಡಿ ಕೊನೆಗೆ ಒಂದು ತೀರ್ಮಾನಕ್ಕೆ ಬರಲಾಯಿತು. ಜೋಮ ಸಾಗುವಳಿ ಮಾಡುತ್ತಿದ್ದ 50 ಸೆಂಟ್ಸ್ ಜಮೀನಿನ ಬದಲು ಹತ್ತಿರದಲ್ಲಿದ್ದ ಭೂಮಾಲೀಕರೊಬ್ಬರ 2 ಎಕರೆ ಜಮೀನನ್ನು ಜೋಮನಿಗೆ ಕೊಡಲಾಯಿತು. ಕೂಡಲೇ ಸಾಗುವ ಚೀಟಿಯನ್ನು ಕೊಡುವುದಾಗಿಯೂ ಭರವಸೆ ನೀಡಿದರು. ಅಲ್ಲದೆ ಸರಕಾರದ ಖರ್ಚಿನಲ್ಲಿ ಮನೆಕಟ್ಟಿಸಿಕೊಡಲು ಮತ್ತು ಭಾವಿ ತೋಡಿಸಿ ಕೊಡಲು ಒಪ್ಪಿದ್ದಾರೆ.

ಸತ್ಯಾಗ್ರಹ ಯಶಸ್ವಿಯಾಗಲು ಶ್ರಮಿಸಿದ ಸ್ಥಳೀಯ ಘಟಕದ ಕಾರ್ಯದರ್ಶಿ ಮತ್ತು ರೈತ ಸಂಘದ ಎಲ್ಲ ಕಾರ್ಯಕರ್ತರನ್ನು ಕಾಂ। ವಿಲ್ಫ್ರೆಡ್ ಮತ್ತು ಕಾಂ। ತಂಬನ್ ಅಭಿನಂದಿಸಿದ್ದಾರೆ.

ಸತ್ಯಾಗ್ರಹ ಯಶಸ್ವಿಗೊಂಡ ನಂತರ ಗ್ರಾಮದಲ್ಲಿ ಮೆರವಣಿಗೆ ಹೊರಡಿಸಲಾಗಿತ್ತು.

ಕೊಮಾರನಹಳ್ಳಿ :

10-7-82 ರಂದು ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಬರಗಾಲ ಪೀಡಿತ ಪ್ರದೇಶದ ಕೊಮಾರನಹಳ್ಳಿ ತಾಂಡಾದ ಜನತೆ ಒಂಬತ್ತು ಮೈಲುಗಳ ಕಾಲ್ನಡಿಗೆ ಜಾಥಾ ಮೂಲಕ ಹಡಗಲಿಗೆ ಬಂದು ತಮ್ಮ ಹಳ್ಳಿಯ ತೀವ್ರವಾದ ಸಮಸ್ಯೆಗಳಿಗೆ ಪರಿಹಾರ ಕೋರಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ. ನೇತೃತ್ವವನ್ನು ಪ್ರಾಂತ ರೈತ ಸಂಘದ ಜಿಲ್ಲಾ ಪ್ರಾದೇಶಿಕ ಸಮಿತಿಯ ಸಂಚಾಲಕ ಕಾಂ। ಪಿ. ಆರ್. ವೆಂಕಟೇಶ್ ವಹಿಸಿದ್ದರು.

ಮನವಿಯ ಮುಖ್ಯಾಂಶಗಳು :

(1) ಭೂಅಭಿವೃದ್ಧಿ ಬ್ಯಾಂಕಿನವರು ಈ ಹಳ್ಳಿಯ 44 ಬಡ ರೈತರಿಗೆ ಭಾವಿ ತೊಡಲು ಸಾಲ ಕೊಡುವುದಾಗಿ ಹೇಳಿ ಅರೆ ಬರೆ ಸಾಲ ಮಂಜೂರು ಮಾಡಿದ್ದರು. ಭಾವಿಗಳು ಪೂರ್ತಿ ಅಗದೇ, ನೀರೂ ಬೀಳದ ಪರಿಸ್ಥಿತಿಯಲ್ಲಿ ಸಾಲ ವಸೂಲಿಗೆ ಬಂದು ದಬ್ಬಾಳಿಕೆ ಮಾಡಿದ್ದಾರೆ.

(2) ಬರಗಾಲ ಪೀಡಿತ ಪ್ರದೇಶದಲ್ಲಿ ಸ್ಪಿಂಕ್ಲೇರ್ ಯೋಜನೆಯನ್ನು ಪ್ರದೇಶದ ನಾಲ್ಕು ಹಳ್ಳಿಗಳಲ್ಲಿ ಪ್ರಾರಂಭಿಸಿ ಸಾಕಷ್ಟು ಹಣ ನುಂಗಿಹಾಕಿ ರೈತರಿಗೆ ಮೋಸಮಾಡಿ ದಲಿತ ರೈತರ ಹೊಲಗಳೆಲ್ಲ ಬ್ಯಾಂಕುಗಳ ಸಾಲಗಳಲ್ಲಿ ಮುಳುಗಿವೆ. ಇದು ದಲಿತ ಉದ್ಧಾರದ ಮಾದರಿ.

(3) ತಾಂಡಾ (ಹಳ್ಳಿ)ದ ಸುತ್ತಲೂ ಸರಕಾರಿ ಬಂಜರು ಜಮೀನು ಸುಮಾರು 400 ಎಕರೆ ಇದ್ದು, ಈ ಜಮೀನನ್ನು ತಾಂಡಾದ ಬಡರೈತ ಕೂಲಿಕಾರರಿಗೆ ಹಂಚಿಕೊಡಬೇಕು... ಇತ್ಯಾದಿ.

ಈ ಚಿಕ್ಕ ಹಳ್ಳಿಯಲ್ಲಿ ರೈತ ಸಂಘದ ಘಟಕವೊಂದನ್ನು ಇದೀಗ ಪ್ರಾರಂಭಿಸಲಾಗಿದೆ. ಪದಾಧಿಕಾರಿಗಳು ಇಂತಿದ್ದಾರೆ :

ಅಧ್ಯಕ್ಷರಾಗಿ ಶ್ಯಾಮಲಾನಾಯಕ್, ಉಪಾಧ್ಯಕ್ಷರಾಗಿ ಪೂರ್ಯಾನಾಯಕ್, ಕಾರ್ಯದರ್ಶಿಯಾಗಿ ಶೆಟ್ಟಿನಾಯಕ್, ಸಹಕಾರ್ಯದರ್ಶಿಯಾಗಿ ದುರ್ಗಾನಾಯಕ್ ಇವರುಗಳಲ್ಲದೇ ಹದಿನೈದು ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನೂ ಚುನಾಯಿಸಲಾಗಿದೆ.

ಹೊಸಳ್ಳಿ :

19-7-82 ರಂದು ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹೊಸಳ್ಳಿ ಗ್ರಾಮದಲ್ಲಿ ರೈತ ಸಂಘದ ಘಟಕವನ್ನು ಪ್ರಾರಂಭಿಸಲಾಯಿತು. ಈ ಕೆಳಕಂಡವರು ಪದಾಧಿಕಾರಿಗಳಾಗಿಯಾಗಿದ್ದಾರೆ : ಅಧ್ಯಕ್ಷರಾಗಿ ರುದ್ರಗೌಡ, ಉಪಾಧ್ಯಕ್ಷರಾಗಿ ನಾಗನಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಪರಮಣ್ಣ, ಕಾರ್ಯದರ್ಶಿಗಳಾಗಿ ಚನ್ನಪ್ಪ ಮತ್ತು ಲಿಂಗಪ್ಪ, ಖಜಾಂಚಿಯಾಗಿ ಹನುಮಂತರೆಡ್ಡಿ ಹಾಗೂ 9 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

ನೆರೆದಿದ್ದ ರೈತರನ್ನುದ್ದೇಶಿಸಿ ರೈತ ಸಂಘದ ತಾಲ್ಲೂಕು ಸಂಚಾಲಕರಾದ ಕಾಂ। ಬಿ. ಲಿಂಗಪ್ಪ ಮತ್ತು ಅಮರಾಪೂರು ಗ್ರಾಮ ಘಟಕದ ಕಾರ್ಯದರ್ಶಿ ಪ್ರಭು ಅವರು ಮಾತನಾಡಿ ಸಂಘಟನೆಯನ್ನು ಬಲಪಡಿಸಲು ಕೋರಿದರು.

ಸೋಮೇಶ್ವರ :

20-7-82 ರಂದು ಮಂಗಳೂರು ತಾಲ್ಲೂಕಿನ ಸೋಮೇಶ್ವರ ಗ್ರಾಮದಲ್ಲಿ ರೈತ ಸಂಘದ ಸಭೆ ನಡೆಯಿತು. ಕಾಂ। ತನಿಯಪ್ಪ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು.

ಪ್ರಾಂತ ರೈತ ಸಂಘದ ಮೂಲಕ ರಾಜ್ಯದ ರೈತರು ಸರಕಾರಕ್ಕೆ ಸಲ್ಲಿಸಲಿರುವ 'ಮಹಾಮನವಿ'ಗೆ ಗ್ರಾಮದಲ್ಲಿ 3000 ಸಹಿಗಳನ್ನು ಸಂಗ್ರಹಿಸಬೇಕೆಂದು ಸಭೆ ತೀರ್ಮಾನಿಸಿತು.

ಗ್ರಾಮದಲ್ಲಿ ಸರಕಾರಿ ಸ್ಥಳದಲ್ಲಿ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಕೂಡಲೇ ಪಟ್ಟಾ ನೀಡಬೇಕೆಂದೂ ಒತ್ತಾಯಿಸಲಾಯಿತು.

ಸಭೆಯನ್ನುದ್ದೇಶಿಸಿ ಗಂಗಯ್ಯಶೆಟ್ಟಿ, ರಮಾನಾಥಗಟ್ಟಿ, ಕೆ. ಆನಂದ ಮತ್ತು ಕಾಂ। ರಾಮಚಂದ್ರ ಉಚ್ಚಿಲ್ ಅವರುಗಳು ಮಾತನಾಡಿ ಸಹಿ ಸಂಗ್ರಹದ ಮಹತ್ವವನ್ನು ವಿವರಿಸಿದರು.

ಎಸ್. ಎಫ್. ಐ. ಚಟುವಟಿಕೆಗಳು

ಗಂಗಾವತಿ :

ರಾಯಚೂರು ಜಿಲ್ಲೆಯ ಗಂಗಾವತಿಯ ಸರಕಾರಿ ಜ್ಯೂನಿಯರ್ ಕಾಲೇಜಿನ ಪ್ರಿನ್ಸಿಪಾಲರ ವಿದ್ಯಾರ್ಥಿ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ 12-7-82 ರಂದು ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಮೆರವಣಿಗೆ ಹೊರಡಿಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ.

ಡೊನೇಷನ್ ಹಾವಳಿ ವಿಪರೀತವಾಗಿರುವದರಿಂದ ವಿದ್ಯಾರ್ಥಿಗಳ ಗೋಳು ಹೇಳತೀರದು. ಡೊನೇಷನ್ ವಿರುದ್ಧ ಕಳೆದ ನಾಲ್ಕು ವರ್ಷಗಳಿಂದ ಎಸ್. ಎಫ್. ಐ. ಸ್ಥಳೀಯ ಘಟಕ ಹೋರಾಟ ನಡೆಸುತ್ತಿದೆ. ಕಳೆದ ವರ್ಷ ಕಾಲೇಜಿನ ವಿದ್ಯಾರ್ಥಿಗಳ ಸಂಘಕ್ಕೆ ಎಸ್. ಎಫ್. ಐ. ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಈ ವರ್ಷ ಕಾಲೇಜ್ ಪ್ರಿನ್ಸಿಪಾಲರು ವಿದ್ಯಾರ್ಥಿ ಸಂಘಕ್ಕೆ ಚುನಾವಣೆಗಳನ್ನೇ ರದ್ದು ಪಡಿಸಿದ್ದಾರೆ.

ಕಾಲೇಜಿಗೆ ಬಡ ವಿದ್ಯಾರ್ಥಿಗಳಿಗೆ ಏನೇನೋ ನೆಪ ಹೇಳಿ ಪ್ರವೇಶ ನಿರಾಕರಿಸಲಾಗುತ್ತಿದೆ. ಕಾಲೇಜಿಗೆ ದೇಣಗೆ ಕೊಟ್ಟವರ ಮಕ್ಕಳಿಗೆ ಮಾತ್ರ ಪ್ರವೇಶ.

ಪ್ರಿನ್ಸಿಪಾಲರ ನಿರಂಕುಶ ವರ್ತನೆಯನ್ನು ಪ್ರತಿಭಟಿಸಲು ಎಸ್.ಎಫ್.ಐ. ನೇತೃತ್ವದಲ್ಲಿ ವಿದ್ಯಾರ್ಥಿಗಳು ಮುಂಬಂದದ್ದು ಸುತ್ತಾರ್ಹ.

ಸವದತ್ತಿ :

11-7-82 ರಂದು ಬೆಳಗಾಂವ್ ಜಿಲ್ಲೆಯ ಸವದತ್ತಿಯಲ್ಲಿ ಸ್ಥಳೀಯ ಎಸ್.ಎಫ್.ಐ. ಘಟಕದ ನೇತೃತ್ವದಲ್ಲಿ ವಿದ್ಯಾರ್ಥಿಗಳ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಸ್.ಎಫ್.ಐ. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ। ಎಸ್. ಆರ್. ಆರಾಧ್ಯ ಮಾತನಾಡಿದರು.

ಕಾಂ। ಆರಾಧ್ಯ ಮಾತನಾಡುತ್ತಾ, "ಪ್ರಸ್ತುತ ಶಿಕ್ಷಣ ಪದ್ಧತಿಯು ಮಿತ ಅವಕಾಶಗಳ ಪೂರ್ಣ ಲಾಭ ಪಡೆದು ಈ ಅವೈಜ್ಞಾನಿಕ ಶಿಕ್ಷಣ ಪದ್ಧತಿಯ ಆಮೂಲಾಗ್ರ ಬದಲಾವಣೆಗಾಗಿ ಶಿಸ್ತುಬದ್ಧವಾದ ಹೋರಾಟವನ್ನು ನಡೆಸಬೇಕು" ಎಂದರು. ಅವರು ಮುಂದುವರೆದು, ವಿದ್ಯಾರ್ಥಿಗಳನ್ನು ಚಳುವಳಿಗೆ ಇಳಿಸುವದೊಂದೇ ಎಸ್. ಎಫ್. ಐ. ಕಾರ್ಯಕ್ರಮವೆಂದು ಮಾಡಲಾಗುತ್ತಿರುವ ಆಪಾದನೆಗಳನ್ನು ತಳ್ಳಿಹಾಕಿದ ಅವರು, ದೇಶದಲ್ಲಿ 8 ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಈ ಸಂಘಟನೆಯಲ್ಲಿ ಮಾಧ್ಯಮಿಕ ಶಾಲೆಗಳಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೂ ವಿವಿಧ ಹಂತಗಳಲ್ಲಿ ರ್‍ಯಾಂಕ್ ವಿಜೇತ ಪ್ರತಿಭಾಶಾಲಿಗಳಿರುವುದನ್ನು ಉದಹರಿಸಿದರು. ಶಿಕ್ಷಣರಂಗದ ತಮ್ಮ ಬೇಡಿಕೆಗಳಿಗಾಗಿ ವಿದ್ಯಾರ್ಥಿಗಳನ್ನು ಶಿಸ್ತುಬದ್ಧವಾದ ಹೋರಾಟಕ್ಕೆ ಇಳಿಸುವುದಲ್ಲದೆ, ಅಷ್ಟೇ ಶಿಸ್ತಿನಿಂದ ತಮ್ಮ ಅಭ್ಯಾಸದಲ್ಲಿ ವಿದ್ಯಾರ್ಥಿಗಳು ಯಶಸ್ಸನ್ನು ಗಳಿಸಲು ಎಸ್. ಎಫ್. ಐ. ಶ್ರಮಿಸುತ್ತದೆ ಎಂದರು.

ಸಭೆಯಲ್ಲಿ ಬೆಂಗಳೂರು ಘಟಕದ ಕಾರ್ಯದರ್ಶಿ ಜಿ. ಎನ್. ಮೋಹನ್ ಅವರೂ ಸಭೆಯಲ್ಲಿ ಉಪಸ್ಥಿತರಿದ್ದು, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಎಸ್.ಎಫ್.ಐ. ಸವದತ್ತಿ ಘಟಕದ ಅಧ್ಯಕ್ಷ ಬಿ. ಎಸ್. ಶಿಂತ್ರಿ ವಹಿಸಿದ್ದರು.

ನೂತನ ಪದಾಧಿಕಾರಿಗಳು :

ಸಂದರ್ಭದಲ್ಲೇ ಎಸ್. ಎಫ್. ಐ. ಸ್ಥಳೀಯ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಆರಿಸಲಾಗಿದೆ. ಅಧ್ಯಕ್ಷರಾಗಿ ಎಸ್.ಕೆ ವಂಟಗೋಡಿ, ಉಪಾಧ್ಯಕ್ಷರಾಗಿ ಎಲ್. ಆರ್. ಅಂಗಡಿ ಮತ್ತು ಎಂ.ಎಸ್.ಬಟಕುರ್ಕಿ, ಕಾರ್ಯದರ್ಶಿಯಾಗಿ ಜಿ.ಎನ್.ಕಳ್ಳೀಮನಿ, ಸಹ ಕಾರ್ಯದರ್ಶಿಯಯಗಿ ಜಿ. ವೈ. ಸಿದ್ಧಾಪೂರ, ಖಜಾಂಚಿಯಾಗಿ ಎಸ್. ಜಿ. ಹೊಳಿಮಠ ಇವರುಗಳನ್ನು ಹಾಗೂ 6 ಜನ ಇತರರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

●

ಜಪ್ಪಿನ ಮೊಗ್ರು :

ಯುವಕ ಮಂಡಲದ ೧೯ನೇ ವಾರ್ಷಿಕೋತ್ಸವ

ಮಂಗಳೂರಿನ ಪಕ್ಕದ ಜಪ್ಪಿನ ಮೊಗ್ರು ಗ್ರಾಮ ಯುವಕ ಮಂಡಲದ 19ನೇ ವಾರ್ಷಿಕ ಮಹಾ ಸಭೆಯು 18-7-82 ರಂದು ಜರುಗಿತು. ಅಧ್ಯಕ್ಷತೆಯನ್ನು ಯುವಕ ಮಂಡಲದ ಅಧ್ಯಕ್ಷ ಜೆ. ಸದಾಶಿವ ಕಾರ್ಪೆಂಟರ ವಹಿಸಿದ್ದರು.

ಆರಂಭದಲ್ಲಿ ಚಂದ್ರಹಾಸ ಅವರು ಅವರು ಸ್ವಾಗತಿಸಿದರು. ಗತ ವರ್ಷದ ವರದಿಯನ್ನು ನಾರಾಯಣ ಅಂಚನ್ ಸಲ್ಲಿಸಿದರು. ಕಾರ್ಯದರ್ಶಿ ರಮೇಶ ಸುಲಾಯರು ಲೆಕ್ಕಪತ್ರ ಮಂಡಿಸಿದರು. ವರದಿ ಮತ್ತು ಲೆಕ್ಕಪತ್ರವನ್ನು ಅಂಗೀಕರಿಸಲಾಯಿತು.

ನೂತನ ವರ್ಷದ ಪದಾಧಿಕಾರಿಗಳಾಗಿ ಈ ಕೆಳಕಂಡವರನ್ನು ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಚಂದ್ರಹಾಸ ಕರ್ಬೆಂಟ್ಟು, ಉಪಾಧ್ಯಕ್ಷರಾಗಿ ಉಮೇಶ ಅತಿಕಾರಿ, ಕಾರ್ಯದರ್ಶಿಯಾಗಿ ರಮೇಶ ಸುಲಾಯ, ಜೊತೆ ಕಾರ್ಯದರ್ಶಿಗಳಾಗಿ ಜಯರಾಮ್ ಸನಿಲ್, ಕೋಶಾಧಿಕಾರಿಯಾಗಿ ಕೆ. ದೇವಪ್ಪ ಮತ್ತು ಕ್ರೀಡಾ ಕಾರ್ಯದರ್ಶಿಯಾಗಿ ನಾರಾಯಣ ಅಂಚನ್ ಹಾಗೂ ಇತರ 7 ಮಂದಿಯಿರುವ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಸಭೆಯನ್ನುದ್ದೇಶಿಸಿ ಸಂಜೀವ ಕಲ್ಲತಡಮೆ, ಚಂದ್ರಹಾಸ, ಸದಾಶಿವ ಕಾರ್ಪೆಂಟರ ಮೊದಲಾದವರು ಮಾತನಾಡಿದರು. ಕೊನೆಯಲ್ಲಿ ಉಮೇಶ ಅತಿಕಾರಿಯವರು ವಂದಿಸಿದರು.

ಅಂತರ ರಾಷ್ಟ್ರೀಯ

ಯುಗೋಸ್ಲಾವಿಯಾ ಕಮ್ಯೂನಿಸ್ಟ್ ಲೀಗ್‌ನ ೧೨ನೇ ಮಹಾಸಭೆಗೆ

ಸಿ. ಪಿ. ಐ. (ಎಂ) ಸಂದೇಶ:

ಯುಗೋಸ್ಲಾವಿಯಾ ಕಮ್ಯೂನಿಸ್ಟ್ ಲೀಗ್‌ನ 12ನೇ ಮಹಾ ಸಭೆಗೆ, ಎಲ್ಲಾ ಪ್ರತಿನಿಧಿಗಳಿಗೆ ಮತ್ತು ತನ್ಮೂಲಕ ಯುಗೋಸ್ಲಾವಿಯಾದ ಎಲ್ಲಾ ಜನತೆಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಶುಭ ಕೋರುತ್ತದೆ.

ಫ್ಯಾಸಿಸ್ಟ್ ವಿರೋಧಿ ಯುದ್ಧದ ಸಂದರ್ಭದಲ್ಲಿ ಯುಗೋಸ್ಲಾವಿಯಾದ ಜನತೆ ನಡೆಸಿದ ಧೀರೋದ್ದಾತ್ತ ಹೋರಾಟದ ಬಗ್ಗೆ ಭಾರತ ದೇಶದ ಜನತೆಗೆ ಹಾಗೂ ನಮ್ಮ ಪಕ್ಷಕ್ಕೆ ಅಪಾರ ಮೆಚ್ಚುಗೆ ಇದೆ ಈ ಹೋರಾಟ ಮತ್ತು ಶ್ರೇಷ್ಠ ತ್ಯಾಗಬಲಿದಾನಗಳು ಭಾರತದ ಜನತೆಗೆ ಹಾಗು ಇಲ್ಲಿನ ಕಾರ್ಮಿಕ ವರ್ಗಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ನೀಡಿದವು.

ಅಮೇರಿಕಾದ ಸಾಮ್ರಾಜ್ಯಶಾಹಿ ಕೊಲೆಗಡುಕ ನೀತಿಗಳಿಂದಾಗಿ ಯುದ್ಧಾಪಾಯ, ಅದರಲ್ಲೂ ವಿಶೇಷವಾಗಿ ಅಣು ಯುದ್ಧ ಇಡೀ ಮಾನವಕುಲವನ್ನೇ ಬೆದರಿಸುತ್ತಿದೆಯೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಭಾವಿಸುತ್ತದೆ. ಯುದ್ಧವೆಂದರೆ ಜಗತ್ತಿನಲ್ಲಿ ಪರಸ್ಪರ ಕಾದಾಟ, ಮಿಲಿಯಾಂತರ ಜೀವರಾಶಿಗಳ, ಪಟ್ಟಣಗಳ, ನಗರಗಳ, ಜನಾಂಗಗಳ ಹಾಗು ಇಡೀ ರಾಷ್ಟ್ರಗಳ ಸರ್ವನಾಶ. ಸಾಮ್ರಾಜ್ಯಶಾಹಿಗಳ ಯುದ್ಧ ತಯಾರಿಯು ಮುಖ್ಯವಾಗಿ ಸೋವಿಯತ್ ದೇಶ ಹಾಗೂ ಇತರ ಸಮಾಜವಾದಿ ದೇಶಗಳ ಮೇಲೆ ಗುರಿ ಮಾಡಲ್ಪಟ್ಟಿದ್ದು, ಸಾಮ್ರಾಜ್ಯಶಾಹಿಗಳು ಜಗತ್ತಿನ ಮೇಲಿನ ತಮ್ಮ ಮೇಲಾಳ್ತನವನ್ನು ಪುನರ್‌ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದಾರೆ ಎಂದು ನಮ್ಮ ಪಕ್ಷವು ತಿಳಿದಿದೆ. ಸೋವಿಯತ್ ದೇಶದ ವಿರುದ್ಧದ ಯುದ್ಧ ಭೂಮಿಯನ್ನಾಗಿ ಯುರೋಪನ್ನು ಪರಿವರ್ತಿಸುವ ಮೂಲಕ ಅಮೇರಿಕಾದ ಸಾಮ್ರಾಜ್ಯಶಾಹಿಗಳು ಇಡೀ ಯುರೋಪಿನ ಜನತೆಯ ಜೀವಕ್ಕೆ ಅಪಾಯವನ್ನುಂಟು ಮಾಡುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳ ಯುದ್ಧೋಪಾಯಗಳನ್ನು ವಿರೋಧಿಸುವುದು ಮತ್ತು ಸೋವಿಯತ್ ದೇಶ ಹಾಗೂ ಇತರ ಸಮಾಜವಾದಿ ರಾಷ್ಟ್ರಗಳನ್ನು ರಕ್ಷಿಸುವುದು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯದ ಮೊದಲ ಕರ್ತವ್ಯವೆಂದು ನಾವು ತಿಳಿದಿದ್ದೇವೆ.

ಸಾಮ್ರಾಜ್ಯಶಾಹಿಗಳ ಯುದ್ಧ ತಯಾರಿ ಯುರೋಪಿಗೆ ಮಾತ್ರ ಸೀಮಿತವಾಗಿಲ್ಲ. ಏಷ್ಯಾಕ್ಕೂ ಇದು ವಿಸ್ತರಿಸಲ್ಪಟ್ಟಿದೆ. ಇವರು ಭಾರತ ಮತ್ತು ಅದರ ನೆರೆ ರಾಷ್ಟ್ರಗಳ ನಡುವೆ ಕಾವಿನ ವಾತವರಣವನ್ನು ಸೃಷ್ಟಿಸುತ್ತಿದ್ದಾರೆ. ಈ ಪ್ರದೇಶಗಳ ಮಿಲಿಟ್ರಿ ಸರ್ವಾಧಿಕಾರಕ್ಕೆ ಪೂರ್ಣ ಪ್ರಮಾಣದಲ್ಲಿ ಸೈನ್ಯ ನೆರವು ನೀಡಲಾಗುತ್ತಿದೆ. ಈ ಸಂದರ್ಭದಲ್ಲಿ ಭಾರತದ ಸಾರ್ವಭೌಮತ್ವವನ್ನು ಕಾಪಾಡುವಲ್ಲಿ, ಈ ಪ್ರದೇಶದಲ್ಲಿ ಶಾಂತಿಯನ್ನು ರಕ್ಷಿಸುವಲ್ಲಿ ಮತ್ತು ಇಡೀ ಜಗತ್ತಿನಲ್ಲಿ ಶಾಂತಿಯನ್ನು ಖಾತರಿಪಡಿಸುವಲ್ಲಿ ಭಾರತ ಮತ್ತು ಸೋವಿಯತ್ ದೇಶದ ನಡುವೆ ಏರ್ಪಟ್ಟಿರುವ ಸ್ನೇಹ ಮತ್ತು ಸಹಕಾರ ಒಪ್ಪಂದವು ಮಹತ್ವದ ಪಾತ್ರವನ್ನು ಪಡೆದಿದೆ ಎಂದು ನಮ್ಮ ಪಕ್ಷವು ತಿಳಿದಿದೆ.

ನಿಮ್ಮಲ್ಲಿರುವುದಕ್ಕಿಂತ ಭಿನ್ನವಾದ ವಾತವರಣದಲ್ಲಿ ನಾವು ನಮ್ಮ ದೇಶದಲ್ಲಿ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದೇವೆ ನಿಮ್ಮಲ್ಲಿ ಈಗಾಗಲೇ ನೀವು ಕ್ರಾಂತಿಯನ್ನು ಸಂಘಟಿಸಿರುವಿರಿ ಆದರೆ ನಮ್ಮಲ್ಲಿ ನಾವಿನ್ನೂ ಅದನ್ನು ಮಾಡಬೇಕಾಗಿದೆ. ಏರುತ್ತಿರುವ ಬೆಲೆಗಳು, ನಿರುದ್ಯೋಗ ಸಮಸ್ಯೆ, ತೀವ್ರವಾದ ಬಡತನ — ಇವುಗಳೆಲ್ಲದರ ವಿರುದ್ಧ ಕಾರ್ಮಿಕ ವರ್ಗದ ಹೋರಾಟಗಳನ್ನು ಒಂದುಗೂಡಿಸಿ ಮುನ್ನಡೆಸುವಲ್ಲಿ ನಾವು ನಿರತರಾಗಿದ್ದೇವೆ. ನಮ್ಮ ದೇಶದಲ್ಲಿ ದೊಡ್ಡ, ಮಧ್ಯಮ ಹಾಗು ಸಣ್ಣ ಕೈಗಾರಿಕಾ ಕ್ಷೇತ್ರಗಳಲ್ಲಿ ರೋಗಗ್ರಸ್ಥವಾಗಿರುವ ಕೈಗಾರಿಕಾ ಘಟಕಗಳ ಸಂಖ್ಯೆ 25,000ಕ್ಕೂ ಮೇಲ್ಪಟ್ಟಿದೆ. ನಿರುದ್ಯೋಗವು 40 ಮಿಲಿಯ ಸಂಖ್ಯೆಯನ್ನು ತಲುಪಿದೆ. ರೈತರಿಗೆ ನ್ಯಾಯ ಬೆಲೆ ಹಾಗು ಕೃಷಿ ಕಾರ್ಮಿಕರಿಗೆ ನ್ಯಾಯ ವೇತನ ನೀಡಲಾಗುತ್ತಿಲ್ಲ. ಬಡತನದ ರೇಖೆಗಿಂತ ಕೆಳಮಟ್ಟದ ಜೀವನ ನಡೆಸುವವರ ಸಂಖ್ಯೆ ಶೇಕಡ 60ಕ್ಕೆ ಏರಲ್ಪಟ್ಟಿದೆ. ಬಂಡವಾಳಶಾಹಿ ಪದ್ಧತಿಯ ಪೂರ್ವ ರೂಪಗಳನ್ನು ಅದರಲ್ಲೂ ವಿಶೇಷವಾಗಿ ಭೂಮಿಗೆ ಸಂಬಂಧಿದಂತೆ, ನಾಶಗೊಳಿಸದಿರುವ ಯೋಜನೆಗಳ ಫಲವಾಗಿ ಈ ಇಕ್ಕಟ್ಟು ಉಂಟಾಗಿದೆ.

ಈ ಗಂಡಾಂತರಕಾರಿ ಆರ್ಥಿಕ ಸ್ಥಿತಿಯು ನಮ್ಮ ದೇಶದ ಮತ್ತು ಪಾರ್ಲಿಮೆಂಟಿನ ಸಾರ್ವಭೌಮತೆಗೇ ಧಕ್ಕೆ ತರುವ ರೀತಿಯಲ್ಲಿ ಅಂತರ ರಾಷ್ಟ್ರೀಯ ಹಣಕಾಸು ನಿಧಿಯಿಂದ ಸಾಲ ಮಾಡುವಂತೆ ಮಾಡಿದೆ. ಇದು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮುಕ್ತ ಪ್ರವೇಶಾವಕಾಶ ಒದಗಿಸಿದ್ದು, ಕಾರ್ಮಿಕ ವರ್ಗದ ಮೇಲೆ ಅವ್ಯಾಹತ ದಾಳಿಗೆ ಕಾರಣವಾಗಿದೆ. ಜನತೆಯ ದೊಡ್ಡ ವಿಭಾಗ ಈ ದಾಳಿಯನ್ನು ಪ್ರತಿಭಟಿಸಿ ಹೋರಾಟಕ್ಕೆ ಇಳಿದಿದೆ ಹೋರಾಟಗಾರರು ಪೋಲಿಸರಿಂದ ಗುಂಡು, ವಿಚಾರಣೆ ಇಲ್ಲದೆ ಬಂಧನ, ಪಾರ್ಟಿ ಮತ್ತು ಸಾಮೂಹಿಕ ಸಂಘಟನೆಗಳ ಮುಖಂಡರ ಕಗ್ಗೊಲೆಗಳನ್ನು ಅನುಭವಿಸಬೇಕಾಗಿದೆ. ವೇತನ ಸ್ಥಂಬನ, ಮುಷ್ಕರಗಳ ಸಂಪೂರ್ಣ ನಿಶೇಧ ಕಾಯಿದೆಗಳ ಜಾರಿ ನಡೆಯುತ್ತಿದೆ. ಕಾರ್ಮಿಕರ ಸಾಮೂಹಿಕ ಚೌಕಾಶಿಯ ಹಕ್ಕನ್ನೇ ಕಿತ್ತುಕೊಳ್ಳಲಾಗಿದೆ.

ಜನತೆಯಲ್ಲಿ ಈ ರೀತಿ ಬೆಳೆಯುತ್ತಿರುವ ಅಸಂತೃಪ್ತಿಯ ಮನೋಭಾವವನ್ನು ಉಪಯೋಗಿಸಿಕೊಂಡು ಅಮೇರಿಕದ ಸಾಮ್ರಾಜ್ಯಶಾಹಿಗಳು ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿದೆ. ಪರಿಣಾಮವಾಗಿ ನಮ್ಮ ದೇಶದ ಏಕತೆಗೇ ದೊಡ್ಡ ಅಪಾಯ ಮೊದಗಿ ಬಂದಿದೆ.

ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಸೋಲಿಸಲು, ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ವಿಶಾಲ ವೇದಿಕೆಯನ್ನು ರಚಿಸಲು, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ರೂಪಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಪ್ರಯತ್ನಿಸುತ್ತಿದೆ.

ಯುಗೋಸ್ಲಾವಿಯಾದ ಕಮ್ಯೂನಿಸ್ಟ್ ಲೀಗ್ ಹಾಗು ಅಲ್ಲಿನ ಜನತೆ ಭಾರತದ ಕಾರ್ಮಿಕ ವರ್ಗದ ಹೋರಾಟಗಳಿಗೆ ಸಹಾಯಕವಾಗಿ ನಿಲ್ಲಬಹುದೆಂಬ ಭರವಸೆಯನ್ನು ಸಿ. ಪಿ. ಐ. (ಎಂ) ಹೊಂದಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಮತ್ತೊಮ್ಮೆ ಯುಗೊಸ್ಲಾವಿಯಾದ ಜನತೆಗೆ ಶ್ರೇಯೋಭಿವೃದ್ಧಿ ಬಯಸುತ್ತಾ ಕಮ್ಯೂನಿಸ್ಟ್ ಲೀಗ್‌ನ 12ನೇ ಮಹಾ ಸಭೆಗೆ ಶುಭ ಕೋರುತ್ತದೆ. ಕ್ರಾಂತಿಕಾರಿ ಶುಭಾಶಯಗಳು.

●

ಎಸ್. ಎಫ್. ಐ. ರಾಜ್ಯ ಸಮಿತಿ ನಿರ್ಣಯಗಳು

ಜುಲೈ 16, 17, 1982 ರಂದು ಮೈಸೂರಿನಲ್ಲಿ ನಡೆದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯ ಸಮಿತಿಯ ನಿರ್ಣಯಗಳು:

ಎಸ್. ಎಫ್. ಐ. ಅಖಿಲ ಭಾರತ ಅಧ್ಯಕ್ಷರಾದ ಎಂ. ಎ. ಬೇಬಿಯವರು ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯ ಘಟಕದ ಅಧ್ಯಕ್ಷರಾದ ಆರ್. ಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಚಟುವಟಿಕಾ ವರದಿ ನೀಡಿದರು.

ನಿರ್ಣಯಗಳು :— ರಾಜ್ಯ ಸಮಿತಿ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಲಾಯಿತು :—

1) **ಪರೀಕ್ಷಾ ಕಾನೂನು :—** ಕಳೆದ ಏಪ್ರಿಲ್ ತಿಂಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಪರೀಕ್ಷೆಗಳಲ್ಲಿ ನಕಲು ಮಾಡುವುದನ್ನು ತಡೆಹಿಡಿಯುವ ನೆಪದಲ್ಲಿ ಹೊರಡಿಸಿರುವ ಸುಗ್ರಿವಾಜ್ಞೆಯು ನಂತರ ಶಾಸನವಾಗಿದ್ದು ಈ ಶಾಸನವು ವಾಸ್ತವವಾಗಿ ಅಧ್ಯಾಪಕರ ಮತ್ತು ವಿದ್ಯಾರ್ಥಿ ಸಮುದಾಯದ ಪ್ರಜಾಪ್ರಭುತ್ವ ಹಕ್ಕುಗಳ ಮರ್ಧನವಾಗಿದೆ. ಶಾಲಾ, ಕಾಲೇಜುಗಳ ಪಠಾರದಲ್ಲಿ ಪೋಲಿಸ್ ಹಸ್ತಕ್ಷೇಪ ಖಂಡನಾರ್ಹವಾದದ್ದು.

2) **ವಿದ್ಯಾರ್ಥಿ ಸಂಘಗಳ ಚುನಾವಣೆ ನಿಶೇಧಕ್ಕೆ ವಿರೋಧಗಳು :—** ಯು. ಜಿ. ಸಿ. ಅಧ್ಯಕ್ಷೆಯಾದ ಶ್ರೀಮತಿ ಮಾಧುರಿ ಶಾರವರು ಶಾಲಾ ಕಾಲೇಜುಗಳ ಚುನಾವಣೆಗಳನ್ನು ರದ್ದುಗೊಳಿಸಿರುವಂತೆ ಹೇಳಿರುವುದನ್ನು, ಮೈಸೂರು ಬೆಂಗಳೂರು ಮೊದಲಾದ ವಿಶ್ವವಿದ್ಯಾಲಯಗಳಲ್ಲಿ ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ರದ್ದುಪಡಿಸಿರುವುದನ್ನು ಖಂಡಿಸಿದ ರಾಜ್ಯ ಸಮಿತಿಯು ಚುನಾವಣೆ ನಡೆಸಲು ಒತ್ತಾಯಿಸಿತು.

3) **ಕಾನೂನು ಆಯೋಗದ ಶಿಫಾರಸ್ಸು ;—** ಆ ಕಾನೂನು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ 5 ವರ್ಷಗಳ ಕಾನೂನು ಪದವಿ ಶಿಕ್ಷಣವನ್ನು ಶಿಫಾರಸ್ಸು ಮಾಡಿರುವುದನ್ನು ಎಸ್. ಎಫ್. ಐ. ಸ್ವಾಗತಿಸುತ್ತದೆ. ಆದರೆ ಈ ಸಂದರ್ಭದಲ್ಲಿ ಉದ್ಯೋಗಿಗಳಿಗೆ, ಅಧ್ಯಾಪಕರುಗಳಿಗೆ, ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಎಸ್. ಎಫ್. ಐ. ರಾಜ್ಯ ಸಮಿತಿ ಒತ್ತಾಯಿಸಿತು.

4. ರಾಜ್ಯದಲ್ಲಿ ಹೆಚ್ಚಾಗಿರುವ ಕ್ಯಾಪಿಟೇಷನ್, ಡೊನೇಷನ್ ಫೀ ಸುಲಿಗೆಯನ್ನು ತೀವ್ರವಾಗಿ ವಿರೋಧಿಸಲಾಯಿತು.

5. ಭಾಷೆಯ ಹೆಸರಿನಲ್ಲಿ ಇತ್ತೀಚೆಗೆ ಕೆ.ಜಿ.ಎಫ್.ನಲ್ಲಿ ನಡೆದ ಗೋಲಿಬಾರನ್ನು ಖಂಡಿಸಲಾಯಿತು.

6. ತುಮಕೂರು ಸಿದ್ದಗಂಗ ಇಂಜನಿಯರಿಂಗ್ ಕಾಲೇಜಿನಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವಾರು ವಿದ್ಯಾರ್ಥಿಗಳ ಅನುಮಾನಸ್ಪದ ಸಾವುಗಳು ಸಂಭವಿಸಿದ್ದು ಇದರ ಹಿನ್ನೆಲೆಯಲ್ಲಿ "ರ್‍ಯಾಗಿಂಗ್" ಹಾವಳಿಯ ಹಸ್ತಕ್ಷೇಪವಿರುವ ಸಾಧ್ಯತೆ ಇದ್ದು ಈ ಬಗ್ಗೆ ಸೂಕ್ತ ವಿಚಾರಣೆ ನಡೆಸಲು ಎಸ್. ಎಫ್. ಐ. ಒತ್ತಾಯಿಸಿತು.

7. ರಾಜ್ಯದಲ್ಲಿ ನಡೆಯುತ್ತಿರುವ ಕೃಷಿ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು.

8. ಎಂ.ಆರ್.ಸ್ಕೀಮ್‌ನ ಲೋಪದೋಷಗಳನ್ನು ಹೋಗಲಾಡಿಸಲು ಹಾಗೂ ಪಠ್ಯ ಪುಸ್ತಕಗಳನ್ನು "ವ್ಯಾಪಾರಿಕರಣ" ಉದ್ದೇಶದಿಂದ ಪ್ರತೀವರ್ಷ ಬದಲಿಸುವುದನ್ನು ವಿರೋಧಿಸಲು ನಿರ್ಧರಿಸಲಾಯಿತು. ಕಡಿಮೆಯಾಗಿರುವ ಕಾನೂನು ಫಲಿತಾಂಶದ ಬಗ್ಗೆ ಆತಂಕ ವ್ಯಕ್ತಪಡಿಸಲಾಯಿತು.

9. **ಸಂಘಟನಾ ನಿರ್ಣಯಗಳು :**

ಅ) ಎಸ್. ಎಫ್. ಐ. 4ನೇ ರಾಜ್ಯ ಸಮ್ಮೇಳನ ಡಿಸೆಂಬರ್‌ನಲ್ಲಿ ನಡೆಸಲು ನಿರ್ಧರಿಸಲಾಯಿತು.

ಆ) ಸೆಪ್ಟೆಂಬರ್ 15 ರಂದು "ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ" ಬೇಡಿಕೆಯನ್ನು ಒತ್ತಾಯಿಸಿ ಹೋರಾಟ ಕಾರ್ಯಕ್ರಮ ರೂಪಿಸಲಾಗುವುದು.

ಸಂತಾಪ ಸೂಚನೆ :– ಇತ್ತೀಚೆಗೆ ನಿಧನರಾದ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ದೇವರಾಜ ಅರಸ್‌ರವರಿಗೆ ಎಸ್.ಎಫ್.ಐ ರಾಜ್ಯ ಸಮಿತಿ ಸಂತಾಪ ವ್ಯಕ್ತಪಡಿಸಿತು.

○

ಐತಿಹಾಸಿಕ ಹೊಣೆ ನಿರ್ವಹಿಸಲು ಕಾರ್ಮಿಕ ವರ್ಗ ಮುಂದಾಗಲಿ

—ಬಿ. ಟಿ. ರಣದಿವೆ

ಜುಲೈ 23 ರಿಂದ 25ರ ವರೆಗೆ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಸಿ ಐ ಟಿ ಯು ಕಾರ್ಯಕಾರಿ ಸಮಿತಿಯ ಸಭೆಯನ್ನುದ್ದೇಶಿಸಿ ಸಿ ಐ ಟಿ ಯು ಅಧ್ಯಕ್ಷ ಕಾಂ। ಬಿ. ಟಿ ರಣದಿವೆ ಮೇಲ್ಕಂಡಂತೆ ತಿಳಿಸಿದರು. ಕಾಂ। ಬಿ ಟಿ. ಆರ್. ಅವರ ಭಾಷಣದ ಸಂಕ್ಷಿಪ್ತ ವಿವರವನ್ನು ಇಲ್ಲಿ ಕೊಡುತ್ತಿದ್ದೇವೆ.

ಒಡನಾಡಿಗಳೇ — ನಾವು ಕಳೆದ ಬಾರಿ ಸೇರಿದಂದಿನಿಂದ ಈಚೆಗೆ ಹಲವಾರು ಘಟನೆಗಳು ಜರುಗಿವೆ. ನಮ್ಮ ಜನರಲ್ ಕೌನ್ಸಿಲ್ ಕಳೆದ ಬಾರಿ ಸೇರಿದ ಸ್ವಲ್ಪ ದಿನಗಳಲ್ಲೇ ನಮ್ಮ ಸಂಘಟನೆಯ ಸಂಸ್ಥಾಪಕರು ಹಾಗೂ ತಮಿಳುನಾಡಿನಲ್ಲಿ ಕಾರ್ಮಿಕ ಚಳುವಳಿಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ ಕಾಂ। ಬಾಲಸುಬ್ರಮಣಿಯಂ ನಮ್ಮನ್ನಗಲಿದರು. ಅವರ ಸಾವು ದೇಶದ ಕಾರ್ಮಿಕ ಚಳುವಳಿಗೆ ದೊಡ್ಡ ಹೊಡೆತವಾಗಿದೆ.

ಕಾಂ। ದಿಮಿತ್ರೋವ್ ಶತಮಾನೋತ್ಸವ

ಅಂತರ ರಾಷ್ಟ್ರೀಯ ಕಾರ್ಮಿಕತೆಯ ನಾಯಕ ಹಾಗೂ ಲೆನಿನ್‌ರಿಂದ ಸ್ಥಾಪಿತವಾದ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಕಾರ್ಯದರ್ಶಿ ಆಗಿದ್ದ ಕಾಂ। ದಿಮಿತ್ರೋವ್‌ರವರ ಜನ್ಮಶತಾಬ್ದಿಯನ್ನು ಈ ವರ್ಷ ಆಚರಿಸಲಾಗುತ್ತಿದೆ. ಬಲ್ಗೇರಿಯಾದ ಮುದ್ರಣ ನೌಕರನಾದ ಕಾಂ। ದಿಮಿತ್ರೋವ್ ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್ ಮೂಲಕ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಕಾರ್ಮಿಕರನ್ನು ಒಂದುಗೂಡಿಸುವಲ್ಲಿ ಯಶಸ್ವಿಯಾದರು. ಅಧಿಕಾರಶಾಹಿ ಅಪಾಯವನ್ನು ಎದುರಿಸುತ್ತಿರುವ ನಮಗೆ ದಿಮಿತ್ರೋವ್‌ರವರ ವಿಚಾರಗಳು ಆಶಾದೀಪವಾಗಿದೆ.

ಅಣುಯುದ್ಧಕ್ಕಾಗಿ ಅಮೇರಿಕನ್ ಸಿದ್ಧತೆ

ಸಾಮೂಹಿಕ ನಾಶಕ್ಕಾಗಿ ಅನುಕೂಲವಾಗುವಂತೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಮಿಲಿಯಾಂತರ ಡಾಲರ್‌ಗಳನ್ನು ಯುದ್ಧ ಸಿದ್ಧತೆಗಾಗಿ ಖರ್ಚು ಮಾಡುತ್ತಿದ್ದಾರೆ. ಯುದ್ಧದ ಅಪಾಯ ಪ್ರತಿನಿತ್ಯ ಹೆಚ್ಚಾಗುತ್ತಿದೆ. ಈ ಯುದ್ಧದ ಅಪಾಯದ ವಿರುದ್ಧ ಭಾರತದ ದುಡಿಯುವ ವರ್ಗ-ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಬೇಕಾಗಿದೆ.

ಸೋವಿಯತ್ ದೇಶವು ಈ ಯುದ್ಧದ ಅಪಾಯದಿಂದ ಪಾರಾಗಲು ಹಲವಾರು ಸೂಚನೆಗಳನ್ನು ಪ್ರಸ್ತಾಪಿಸಿದೆ. ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ನಿಯಂತ್ರಿಸಿ ಕ್ರಮೇಣ ಎಲ್ಲ ಅಣು ಶಸ್ತ್ರಾಸ್ತ್ರಗಳನ್ನು ತೊಡೆದು ಹಾಕುವ ದಿಕ್ಕಿನಲ್ಲಿ ಈ ಸೂಚನೆಗಳು ಸಹಕಾರಿಯಾಗಿವೆ.

ಯುದ್ಧ ವಿರೋಧಿ ಹೋರಾಟದಲ್ಲಿ ಭಾರತದ ಕಾರ್ಮಿಕ ಸಂಘಟನೆಗಳು

ಮಾನವ ಕುಲವನ್ನೇ ತೊಡೆದು ಹಾಕುವ ಈ ಯುದ್ಧ ನೀತಿಯ ವಿರುದ್ಧ ಭಾರತದ ಕಾರ್ಮಿಕ ಚಳುವಳಿ ಯಾವ ಪಾತ್ರ ವಹಿಸುತ್ತಿದೆ? ವಿಭಿನ್ನ ಸಿದ್ಧಾಂತಗಳ ಪ್ರಭಾವದಿಂದಾಗಿ ಕಾರ್ಮಿಕ ಸಂಘಟನೆಗಳು ತಮ್ಮ ಐತಿಹಾಸಿಕ ಜವಾಬ್ದಾರಿಗೆ ಬೆನ್ನು ತಿರುಗಿಸಿವೆ. ಆದರೆ CITU ದೇಶದಾದ್ಯಂತ ತನ್ನ ಪ್ರತಿಭಟನೆ ವ್ಯಕ್ತಪಡಿಸಿದೆ. ಇಡೀ ಕಾರ್ಮಿಕ ವರ್ಗ ಅಂತರ ರಾಷ್ಟ್ರೀಯ ಐಕ್ಯಮತ್ಯ ಮತ್ತು ಯುದ್ಧ ವಿರೋಧಿ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡುವ ಜವಾಬ್ದಾರಿ CTIU ಮೇಲಿದೆ. ಸೆಪ್ಟೆಂಬರ್ 1ರಂದು ಯುದ್ಧ ವಿರೋಧಿ ಮತ್ತು ಶಾಂತಿಗಾಗಿನ ದಿನವನ್ನಾಗಿ ಆಚರಿಸಬೇಕಾಗಿದೆ.

ಇಸ್ರೇಲಿ ಆಕ್ರಮಣ

ಅಮೇರಿಕದಿಂದ ಪ್ರಚೋದಿತವಾದ ಲೆಬನಾನ್ ಹಾಗೂ ಪಾಲಿಸ್ತೇನಿಯನ್ ಲಿಬರೇಷನ್ ಆರ್ಗನೈಜೇಷನ್ (P.L.O.) ವಿರುದ್ಧದ ಇಸ್ರೇಲಿ ಆಕ್ರಮಣವನ್ನು ಎಲ್ಲ ಪುರೋಗಾಮಿ ಶಕ್ತಿಗಳು, ಎಲ್ಲ ಸಮಾಜವಾದಿ ರಾಷ್ಟ್ರಗಳು ಮತ್ತು ಅಲಿಪ್ತ ದೇಶಗಳು ಖಂಡಿಸಿವೆ. CITU ಸಂಘಟನೆಗಳು ಕಾರ್ಮಿಕರನ್ನು ಒಂದುಗೂಡಿಸುತ್ತಾ ಇಸ್ರೇಲಿ ಹಾಗೂ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಬಯಲಿಗೆಳೆಯಬೇಕು ಮತ್ತು P. L. O. ಗೆ ಬೆಂಬಲ ವ್ಯಕ್ತಪಡಿಸಬೇಕು.

ಇಸ್ರೇಲಿಗಳ ಈ ಆಕ್ರಮಣವನ್ನು ನೇರ ಮಾತುಗಳಲ್ಲಿ ಇಂದಿರಾ ಸರ್ಕಾರ ಪ್ರತಿಭಟಿಸದಿರುವುದು ಆಶ್ಚರ್ಯಕರವಾಗಿದೆ. ಮತ್ತೊಂದು ಗಮನಿಸಬೇಕಾದ ಸಂಗತಿಯೆಂದರೆ ಭಾರತದಲ್ಲಿನ ಅಮೇರಿಕದ ಬಾಲಬಡುಕರು ಈ ಆಕ್ರಮಣವನ್ನು ಬೆಂಬಲಿಸುವುದಲ್ಲದೆ, ಸಂಸತ್ತಿನಲ್ಲಿ ಈ ಆಕ್ರಮಣವನ್ನು ಖಂಡಿಸುವ ನಿರ್ಣಯಕ್ಕೆ ಪ್ರತಿಭಟಿಸಿದ್ದಾರೆ.

ಇಸ್ಲಾಂ ರಕ್ಷಕರೆಂದುಕೊಳ್ಳುವ ಹಲವಾರು ಮುಸ್ಲಿಂ ಆಡಳಿತಗಳ ವಿಶ್ವಾಸಘಾತುಕ ಅಂಶವನ್ನು ಇಸ್ರೇಲಿ ಆಕ್ರಮಣವು ಬಯಲುಗೊಳಿಸಿದೆ. ಪ್ಯಾಲೆಸ್ತೇನಿಯನ್ ಜನತೆಗೆ ದ್ರೋಹ ಬಗೆದಿರುವ ಈ ಮುಸ್ಲಿಂ ಮೂಲಭೂತವಾದಿಗಳ ಮುಖವಾಡ ಬಯಲಾಗಿದೆ.

ಇಸ್ರೇಲಿ ಕಾರ್ಮಿಕರ ವಿರೋಧ


ಸಂತೋಷದ ಸಂಗತಿಯೆಂದರೆ ಇಸ್ರೇಲಿ ಕಾರ್ಮಿಕರು ತನ್ನ ಸರ್ಕಾರದ ಆಕ್ರಮಣ ನೀತಿಯನ್ನು ಖಂಡಿಸಿರುವುದಲ್ಲದೆ ಪ್ಯಾಲೇಸ್ತೇನಿಯನ್ ಜನತೆಗೆ ಸ್ವಾತಂತ್ರವನ್ನು ಮತ್ತು ನ್ಯಾಯ ದೊರೆಯಬೇಕೆಂದು ಪ್ರದರ್ಶನ ನಡೆಸಿದೆ.

ಮುರಿದು ಬೀಳುತ್ತಿರುವ ವ್ಯವಸ್ಥೆ

ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ವಿರುದ್ಧ ಅಧಿಕಾರಿಶಾಹಿಯ ಧಾಳಿ ಕಳೆದ ವರ್ಷ ತೀವ್ರಗೊಂಡಿತು. ಕಳೆದ ಚುನಾವಣೆಯಲ್ಲಿ CITU ಒಳಗೊಂಡಂತೆ ಇನ್ನಿತರ ಎಡ ಶಕ್ತಿಗಳು ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಅಧಿಕಾರಶಾಹಿ ಪಕ್ಷಕ್ಕೆ ಸರಿಯಾದ ಉತ್ತರ ನೀಡಿದೆ. ಈ ಅಧಿಕಾರಶಾಹಿ ಪಕ್ಷವನ್ನು ಸೋಲಿಸುವಂತೆ ವಿಶಾಲ ರಂಗವನ್ನು ಕಟ್ಟುವಲ್ಲಿ ಕಾರ್ಮಿಕ ಚಳುವಳಿಯು ಸಹಕರಿಸಬೇಕಾಗಿದೆ.

ಸುಳ್ಳು ನೆನಗಳು

ಜನತೆಯ ಹಕ್ಕುಗಳನ್ನು ದಮನಗೊಳಿಸುವ ಅಧಿಕಾರಶಾಹಿಯು ಪ್ರಥಮವಾಗಿ ಕಾರ್ಮಿಕ ವರ್ಗದ ಹಕ್ಕುಗಳನ್ನು ದಮನಗೊಳಿಸುತ್ತದೆ. ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕಲು ESMA ಜೊತೆಗೆ ಇನ್ನಿತರ ಮೂರು ಮಸೂದೆಗಳನ್ನು ತಂದಿದೆ. ಇವುಗಳ ಉದ್ದೇಶ ಕಾರ್ಮಿಕರು ಈಗ ಅನುಭವಿಸುತ್ತಿರುವ ಹಕ್ಕುಗಳನ್ನು ಮೋಟಕುಗೊಳಿಸುವುದು, ವೇತನವನ್ನು ಕಡಿಮೆ ಮಾಡುವುದು ಮತ್ತು ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕ ವರ್ಗದ ಮೇಲೆ ಹೇರುವುದು.



ಕಾರ್ಯಕಾರಿ ಸಮಿತಿ ಸದಸ್ಯರನ್ನುದ್ದೇಶಿಸಿ ಕಾಂ। ಬಿ. ಟಿ. ಆರ್. ಮಾತನಾಡುತ್ತಿರುವುದು.

ಕೂಲಿಯ ನಿಯಂತ್ರಣ

ಈ ಹಿನ್ನಲೆಯಲ್ಲಿ ಕಾರ್ಮಿಕ ವರ್ಗದ ಕೂಲಿಯ ವಿರುದ್ಧ ಸರ್ಕಾರ ತನ್ನ ಧಾಳಿಯನ್ನು ಯೋಚಿಸಿದೆ. ಶೇಕಡ 10 ಕ್ಕಿಂತ ಹೆಚ್ಚಿನ ಕೂಲಿಯ ಹೆಚ್ಚಳವನ್ನು ಕಾನೂನು ಬಾಹಿರವೆಂದು ಸಾರಿದೆ

ಸಾರ್ವಜನಿಕ ಉದ್ದಿಮೆಗಳ ಕೇಂದ್ರವು ಆಡಳಿತ ವರ್ಗಕ್ಕೆ ಈ ಕೆಳಕಂಡ ನಿರ್ದೇಶಗಳನ್ನು ನೀಡಿದೆ. ಇವುಗಳನ್ನು ಖಾಸಗೀ ಕ್ಷೇತ್ರದ ಉದ್ದಿಮೆಗಳೂ ಸ್ವಾಭಾವಿಕವಾಗಿಯೇ ಅನುಸರಿಸುತ್ತವೆ.

(1) ಪ್ರಸ್ತುತ ಉತ್ಪಾದನಾ ಮಟ್ಟದಲ್ಲಿ ಕೂಲಿಯ ಹೆಚ್ಚಳವಿಲ್ಲ: ಮುಂದಿನ ಎಲ್ಲ ಕೂಲಿಯ ಹೆಚ್ಚಳವೂ ಅಧಿಕ ಉತ್ಪದನೆಯೊಂದಿಗೆ ಸಂಭಂಧಿಸಿರಬೇಕು.

(2) ಮುಂದಿನ ಕೂಲಿ ಒಪ್ಪಂದದಲ್ಲಿ ಪೂರ್ವಭಾವಿಯಾಗಿ ಜಾರಿಗೆ ಬರುವಂತಿಲ್ಲ.

(3) ಈ ಒಪ್ಪಂದವು ನಾಲ್ಕು ವರ್ಷ ಜಾರಿಯಲ್ಲಿರಬೇಕು.

(4) ಎಲ್ಲ ಸೌಲಭ್ಯಗಳನ್ನು ಒಳಗೊಂಡಂತೆ ಶೇಕಡ 10ಕ್ಕಿಂತ ಕೂಲಿಯ ಹೆಚ್ಚಳವಿರಬಾರದು.

(5) ತುಟ್ಟಿ ಭತ್ತೆಯ ದರವು ಪಾಯಿಂಟಿಗೆ ರೂ. 1-30ನ್ನು ಮೀರಬಾರದು.

ಉತ್ಪಾದನೆಯ ಲಾಭ ಯಾರಿಗೆ ?

ಇದುವರೆಗಿನ ಅಧಿಕ ಉತ್ಪಾದನೆಯ ಪ್ರಯೋಜಕರು ಮಾಲೀಕರೆ ಹೊರತು ಕಾರ್ಮಿಕರಲ್ಲ. ಉತ್ಪಾದನೆ ಅಧಿಕಗೊಂಡಿದ್ದರೂ ಬಂಡವಾಳಶಾಹಿ ಸಮಾಜದ ಅನಿವಾರ್ಯ ನಿಯಮದಂತೆ ಕಾರ್ಮಿಕನ ಕೂಲಿ ಕೆಳಗಿಳಿಯುತ್ತದೆ. ಭಾರತದ ಕಾರ್ಮಿಕನ ಅನುಭವವೂ ಇದೇ ಆಗಿದೆ.

ಕಾರ್ಮಿಕ ಸಚಿವಾಲಯ ನಿಲುವು

ಅಧಿಕ ಉತ್ಪಾದನೆಗೆ ಅನುಕೂಲವಾಗುವಂತೆ ಹಲವಾರು ಕ್ರಮಗಳನ್ನು ಕೈಗೊಳ್ಳುವಂತೆ ಉದ್ದಿಮೆದಾರರಿಗೆ ಕಾರ್ಮಿಕ ಸಚಿವಾಲಯ ಕರೆ ನೀಡಿದೆ. ಕಾರ್ಮಿಕರಲ್ಲಿ ನಂಬಿಕೆ ಹುಟ್ಟಿಸುವಂತೆ ಅವರ ಸಂಕಷ್ಟಗಳನ್ನು ಪರಿಹರಿಸುವಂತೆ ಕ್ರಮಗಳನ್ನು ಸೂಚಿಸಿದೆ. ಆದರೆ ಇವೆಲ್ಲವು ಕಳೆದ ಮೂರು ದಶಕಗಳಿಂದ ಆಡುತ್ತಿರುವ ನಾಟಕದ ಪುನರಾವರ್ತನೆ ಮಾತ್ರ.

ಅಧಿಕ ಉತ್ಪಾದನೆಗಾಗಿ ಕಾರ್ಮಿಕನನ್ನು ಪ್ರೇರೇಪಿಸುವಂತೆ ಮಾಡಿರುವುದಾದರು ಏನು ? ನಿಜವಾದ ಕೂಲಿಯಲ್ಲಿ ಕಡಿತ, ಉದ್ದಿಮೆಯ ಮಾಲಿಕರಿಗೆ ಅಧಿಕ ಲಾಭ !

ಸೈದ್ಧಾಂತಿಕ ಪ್ರಚಾರ

ಈ ಅಧಿಕ ಉತ್ಪಾದನೆ, ಈ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಕಾರ್ಮಿಕರು ಆಡಳಿತದಲ್ಲಿ ಪಾಲ್ಗೊಳ್ಳುವುದು ಮುಂತಾದ ಕರೆಗಳು ಕಾರ್ಮಿಕ ಸಂಘಟನೆಗಳನ್ನು ಸಮಾಜದ ಇನ್ನಿತರ ವಿಭಾಗಗಳಿಂದ ಪ್ರತ್ಯೇಕಗೊಳಿಸುವ ಸರ್ಕಾರದ ಕುಂತಂತ್ರವೆನ್ನುವುದನ್ನು

(7ನೇ ಪುಟ ನೋಡಿ)



ಸಭೆಯಲ್ಲಿ ಪಾಲ್ಗೊಂಡಿದ್ದ ಕಾಂ। ಜ್ಯೋತಿ ಬಸುರೊಂದಿಗೆ ಕಾಂ। ಬಿ. ಟಿ. ಆರ್. ಸಂಭಾಷಿಸುತ್ತಿರುವುದು.

ಆರ್ಥಿಕ ಸಮೀಕ್ಷೆ :

ಜೀವ ವಿಮಾ ನಿಗಮದ ವಿಭಜನೆ ಅಗತ್ಯವೆ?

—ಆರ್. ಚಂದ್ರ

ವಿಭಜನೆಗೆ ಪ್ರಬಲ ವಿರೋಧ:

ಜೀವ ವಿಮಾ ನಿಗಮದ (L.I.C.) ವಿಭಜನೆಯ ಪರ ಮತ್ತು ವಿರೋಧವಾಗಿ ಇತ್ತೀಚೆಗೆ ದೇಶಾದ್ಯಂತ ಬಿರುಸಿನ ಚರ್ಚೆ ನಡೆಯುತ್ತಿದೆ. ವಿಭಜನೆಗೆ ನಿಗಮದ 45,000 ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರ ಸಂಘಗಳು ತಮ್ಮ ಪ್ರಬಲ ವಿರೋಧ ವ್ಯಕ್ತಪಡಿಸಿವೆ. ಅಲ್ಲದೆ, ವಿಮಾ ನೌಕರರ ಅತ್ಯಂತ ದೊಡ್ಡ ಸಂಘವಾದ ಅಖಿಲ ಭಾರತ ವಿಮಾ ನೌಕರರ ಮಹಾ ಸಂಘವು (AIIEA) ಸಂಸತ್ತಿನ ಒಳಗೂ ಹೊರಗೂ ನಿಗಮದ ವಿರುದ್ಧ ಭಾರೀ ಪ್ರಚಾರ ಪ್ರಕ್ಷೋಭೆ ನಡೆಸುತ್ತಿದೆ. ನಿಗಮದ 6500 ಅಭಿವೃದ್ಧಿ ಅಧಿಕಾರಿಗಳ ಮತ್ತು 4500 ಪ್ರಥಮ ದರ್ಜೆಯ ಅಧಿಕಾರಿಗಳ ಮಹಾಸಂಘಗಳೂ, ಒಂದು ಲಕ್ಷಕ್ಕೂ, ಹೆಚ್ಚು ಸಂಖ್ಯೆಯಲ್ಲಿರುವ ವಿಮಾ ಪ್ರತಿನಿಧಿಗಳ ಮಹಾ ಸಂಘವೂ ನಿಗಮದ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿವೆ. ಪ್ರಸಿದ್ಧ ಪತ್ರಿಕಾ ಕರ್ತರಾದ ಎಂ. ವಿ. ಕಾಮತ್ ಅವರು ನಿಗಮದ ವಿಭಜನೆಯು ಅನಗತ್ಯ ಎಂದು ಇತ್ತೀಚೆಗೆ ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಡೇ ಸ್ಟ್ಯಾಂಡರ್ಡ್‌ನಲ್ಲಿ ಸುದೀರ್ಘ ಲೇಖನ ಬರೆದಿದ್ದಾರೆ. ಹಾಗೆಯೇ 1977 ರಷ್ಟರಲ್ಲಿಯೇ ನಿಗಮದ ನಿವೃತ್ತ ಅಧಿಕಾರಿ ಪಿ. ಯು. ಓಝಾ ಅವರು ವಿಭಜನೆಯ ವಿರುದ್ಧ ಫಿನಾನ್ಶಿಯಲ್ ಎಕ್ಸ್‌ಪ್ರೆಸ್‌ನಲ್ಲಿ ಸಕಾರಣವಾಗಿ ವಾದಿಸಿದ್ದಾರೆ. ನಿಗಮದ ವಿಭಜನೆಗೆ ಅದರ ವರಿಷ್ಠ ಆಡಳಿತ ಮಂಡಳಿಯೂ ಪೂರ್ಣ ಬೆಂಬಲ ನೀಡದಿರುವ ವಿಷಯವೂ ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ! ವಿಭಜನೆಯಿಂದ ನಿಗಮದ ನೌಕರರ ಅಶಾಂತಿಯ ಸಮಸ್ಯೆಯನ್ನು ಪರಿಹರಿಸಲು ಅಸಾಧ್ಯ ಎಂದು ಪ್ರಧಾನಿ ಇಂದಿರಾ ಗಾಂಧಿಯ ಆಪ್ತ ಸಲಹಾಗಾರ ಹಾಗೂ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಎಲ್. ಕೆ. ಝಾ ಅವರೂ ಅಭಿಪ್ರಾಯ ಪಟ್ಟಿದ್ದಾರೆ!

ಜೀವ ವಿಮಾ ನಿಗಮದ ವಿಭಜನೆಯ ವಾದ ಹೊಸತೇನೂ ಅಲ್ಲ. ಮೊದಲು ಜೀವ ವಿಮೆಯ ರಾಷ್ಟ್ರೀಕರಣವನ್ನೇ ವಿರೋಧಿಸುತ್ತಿದ್ದ ಖಾಸಗೀ ಏಕಸ್ವಾಮ್ಯ ಬಂಡವಾಳಶಾಹಿ ಹಿತ್ತಾಶಕ್ತಿಗಳು, ನಂತರ ರಾಷ್ಟ್ರೀಕೃತ ಜೀವ ವಿಮೆಯ ಏಕಸ್ವಾಮ್ಯತೆಯನ್ನು ವಿರೋಧಿಸಲಾರಂಭಿಸಿ ಜೀವ ವಿಮೆಯ 4-5 ನಿಗಮಗಳನ್ನು ಸ್ಥಾಪಿಸಬೇಕೆಂದು ವಾದ ಒತ್ತಾಯ ಪ್ರಾರಂಭಿಸಿದವು. ನಿಗಮದ ಕಾರ್ಯಕಲಾಪಗಳ ಸಮೀಕ್ಷೆ ನಡೆಸುತ್ತಿದ್ದಾಗಲೆಲ್ಲಾ, ಕಾರ್ಮಿಕ ಅಶಾಂತಿ ತಲೆ ದೋರಿದಾಗಲೆಲ್ಲಾ, ಅವರ ವಿಭಜನೆಯ ವಾದವನ್ನು ಸ್ಥಾಪಿತ ಹಿತಾಶಕ್ತಿಗಳು ಮುಂದೊಡ್ಡುತ್ತಿದ್ದವು, ಮೊದಮೊದಲು ಕಾಂಗ್ರೆಸ್ ಸರಕಾರವೇ ವಿಭಜನೆಯ ವಾದವನ್ನು ತಳ್ಳಿ ಹಾಕಿ ಜೀವ ವಿಮಾ ನಿಗಮದ ಏಕಸ್ವಾಮ್ಯತೆಯನ್ನು ಕಾಪಾಡುತ್ತಾ ಬಂತು. ಮುಂದೆ 1961 ರಲ್ಲಿ ವೀಕ್ಷಣ ಸಮಿತಿ (Estimate Committee), 1968 ರಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಯನ ಸಮಿತಿ (Study group of Administrative Reforms Commission), 1969 ರಲ್ಲಿ ಮೊರಾರ್ಕ ಸಮಿತಿ, ಮುಂತಾದ ತಜ್ಞ ಸಮಿತಿಗಳು ಜೀವ ವಿಮಾ ನಿಗಮದ ವಿವಿಧ ವಿಷಯಗಳನ್ನು ಅಭ್ಯಸಿಸಿ ನಿಗಮದ ಕುಂದುಕೊರತೆಗಳನ್ನು ನೀಗಿಸಲು ವಿಭಜನೆಯು ಪರಿಹಾರ ಮಾರ್ಗವಲ್ಲ ಎಂದು ಸ್ಪಷ್ಟಪಡಿಸಿದವು.

ವಿಭಜನೆಯ ತತ್ವ ಒಪ್ಪಿದರೆ, ರಾಜ್ಯಕ್ಕೊಂದು ಜೀವ ವಿಮಾ ನಿಗಮ ಬೇಕು ಎಂಬ ವಾದ ಬೆಳೆದು ಪ್ರಾಂತೀಯತೆಯ ಭಾವನೆಗೆ ಪ್ರಚೋದನೆ ಸಿಕ್ಕಿ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಆದೀತು ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಯನ ಸಮಿತಿ ಎಚ್ಚರಿಕೆ ನೀಡಿತು. ನಿಗಮದ ಕಾರ್ಯ ದಕ್ಷತೆ ಹೆಚ್ಚಿಸಲು ನೌಕರರು ಅಧಿಕಾರಿಗಳು, ವಿಮಾ ಪ್ರತಿನಿಧಿಗಳು, ಮತ್ತಿತರ ಹಿತಾಶಕ್ತಿಗಳು ಆಡಳಿತದ ಎಲ್ಲಾ ಹಂತಗಳಲ್ಲಿ ಪಾಲುಗಾರರಾಗಬೇಕೆಂದೂ, ಶಾಖೆಗಳಿಗೆ ಹೆಚ್ಚಿನ ಸೇವಾ ಕಾರ್ಯಗಳನ್ನು ವಿಕೇಂದ್ರಿಕರಣಗೊಳಿಸಬೇಕೆಂದೂ ಈ ಸಮಿತಿ ಸಲಹೆ ನೀಡಿತು. ಆಡಳಿತ ವೆಚ್ಚ ಕಡಿಮೆ ಮಾಡಲು ಕೇಂದ್ರ, ವಿಭಾಗ ಮತ್ತು ಶಾಖಾ ಕಛೇರಿಗಳನ್ನು ಮಾತ್ರ ಇರಗೊಳಿಸಿ ಐದು ವಲಯ ಕಛೇರಿಗಳನ್ನು ರದ್ದುಗೊಳಿಸಬೇಕೆಂದು ಮೊರಾರ್ಕ ಸಮಿತಿ ಸಲಹೆ ನೀಡಿತು. ಶಾಖೆಗಳಿಗ ಹೆಚ್ಚಿನ ಸೇವಾಕಾರ್ಯಗಳನ್ನು ವಿಕೇಂದ್ರೀಕರಣಗೊಳಿಸಿ, ವಿಭಾಗ ಮತ್ತು ಕೇಂದ್ರ ಕಛೇರಿಗಳು ಅಭಿವೃದ್ಧಿ ಯೋಜನೆ, ನಿಯಂತ್ರಣ, ಸಂಯೋಜನೆ, ನಿರ್ದೇಶನಗಳತ್ತ ಹೆಚ್ಚು ಗಮನ ನೀಡಬೇಕೆಂದು ಈ ಸಮಿತಿ ಪ್ರತಿಪಾದಿಸಿತು.

ಸರಕಾರದ ದುರುದ್ದೇಶ:

ಜೀವ ವಿಮಾ ನಿಗಮದ ವಿಭಜನೆಗೆ ನೌಕರರ, ಅಧಿಕಾರಿಗಳ, ವಿಮಾ ಪ್ರತಿನಿಧಿಗಳ, ತಜ್ಞರ, ವರಿಷ್ಠ ಆಡಳಿತ ಮಂಡಳಿಯ, ತಜ್ಞ ಸಮಿತಿಗಳ ವಿರೋಧವಿದ್ದರೂ ಇಂದಿರಾ ಸರಕಾರ ಜೀವ ವಿಮಾ ನಿಗಮವನ್ನು 54-ಸ್ವತಂತ್ರ ನಿಗಮಗಳನ್ನಾಗಿ ವಿಭಜಿಸಲು ಫೆಬ್ರವರಿ 1981ರಲ್ಲಿಯೇ ಘೋಷಿಸಿರುವುದೇಕೆ? ಈಗ ನಡೆಯುತ್ತಿರುವ ಮಳೆಗಾಲದ ಸಂಸತ್ತಿನ ಅಧಿವೇಶನದಲ್ಲಿಯೇ ಜೀವ ವಿಮಾ ನಿಗಮದ ವಿಭಜನೆಗೆ ಸಂಬಂಧಿಸಿದ ಮಸೂದೆಯೊಂದನ್ನು ಮಂಡಿಸಲು ಅವಸರಪಡುತ್ತಿರುವುದೇಕೆ? 1979 ರಲ್ಲಿ ಜನತಾ ಸರಕಾರ ಜೀವ ವಿಮಾ ನಿಗಮದ ಕುರಿತು ವಿಶೇಷ ಅಧ್ಯಯನ ಮಾಡಲು ಇಳಾಚೆಳಿಯನ್ ಸಮಿತಿಯನ್ನು ನೇಮಿಸಿತು. ಸಮಿತಿಯು 1980ರಲ್ಲಿ ವರದಿ ಸಲ್ಲಿಸಿದಾಗ ಕೇಂದ್ರದಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು, 1975-77ರ ತುರ್ತು ಪರಿಸ್ಥಿತಿಯ ಅತಿರೇಕಗಳ ಕುರಿತಾಗಿ ಜನತಾ ಸರಕಾರ ನೇಮಿಸಿದ ಎಲ್ಲಾ ತನಿಖಾ ಆಯೋಗಗಳ ಸಮಿತಿಗಳ ವರದಿಗಳನ್ನು ಅಲಕ್ಷಿಸಿ ಮೂಲೆಗುಂಪಾಗಿಸಿದ ಇಂದಿರಾ ಸರಕಾರ ಜೀವ ವಿಮಾ ನಿಗಮವನ್ನು ವಿಭಜಿಸಬೇಕೆಂಬ ಇಳಾಚೆಳಿಯನ್ ಸಮಿತಿಯ ಸಲಹೆಯನ್ನು ಮಾತ್ರ ಯಾಕೆ ಅವಸರದಲ್ಲಿ ಅಂಗೀಕರಿಸಿತು? ಈ ಸಮಿತಿಯ ವರದಿಯು ಸಂಸತ್ತಿನಲ್ಲಿ ಚರ್ಚಿಸಲೂ ಇಲ್ಲ. ಪಾಲಿಸಿದಾರರ ಹಿತಾಸಕ್ತಿಗಳಿಗನುಗುಣವಾದ ಈ ಸಮಿತಿಯ ಅನೇಕ ಸಲಹೆಗಳನ್ನು ಸರಕಾರ ಕೈಬಿಟ್ಟು ವಿಭಜನೆಯ ಸಲಹೆಯನ್ನು ಮಾತ್ರ ಅಂಗೀಕರಿಸಿತೇಕೆ? ವಿಭಜನೆಯ ಸಲಹೆಯು ಸಮಿತಿಯ ಕಾರ್ಯ ವ್ಯಾಪ್ತಿಗೆ ಮೀರಿದ್ದರೂ ಸರಕಾರ ಆ ಸಲಹೆ ಒಂದನ್ನೇ ಸ್ವೀಕರಿಸಿತೇಕೆ?

ಜೀವವಿಮಾ ಉದ್ಯಮದ ಅಭಿವೃದ್ಧಿಯ ಮುಂದಿನ ಹೊಸ ಸವಾಲುಗಳನ್ನು ಎದುರಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಜೀವ ವಿಮೆ ಹೆಚ್ಚಿಸುವುದು, ಏಕಸ್ವಾಮ್ಯವಿರುವ ಈಗಿನ ಬೃಹತ್ ಗಾತ್ರದ ಜೀವ ವಿಮಾ ನಿಗಮವು ಆಡಳಿತಕ್ಕೆ ಹೊರೆಯಾಗಿರುವುದರಿಂದ ಅದರ ವಿಭಜನೆಯಿಂದಾಗಿ ಆಡಳಿತ ಸುಗಮಗೊಳಿಸುವುದು, ಖರ್ಚು ಕಡಿಮೆ ಮಾಡುವುದು, ನಿಗಮಗಳೊಳಗಿನ ಸ್ಪರ್ಧೆಯಿಂದಾಗಿ ಕಾರ್ಯ ಧಕ್ಷತೆ ಹೆಚ್ಚಿಸುವುದು, ಪಾಲಿಸಿದಾರರಿಗೆ ಉತ್ತಮ ಸೇವೆ ಸಲ್ಲಿಸುವುದು, ಇತ್ಯಾದಿ ಉದ್ದೇಶಗಳನ್ನು ಸರಕಾರ ಮುಂದೊಡ್ಡಿದೆ. ಆದರೆ, ಇವೆಲ್ಲವುಗಳೂ ತೋರಿಕೆಗೆ ಮಾತ್ರ! ನಿಜವಾದ ಉದ್ದೇಶ - ದುರುದ್ದೇಶ ಬೇರೆಯೇ ಇದೆ! ನೌಕರರ ಒಗ್ಗಟ್ಟನ್ನು ಮುರಿದು, ಅವರ ವೇತನ, ತುಟ್ಟಿ ಭತ್ತೆ, ಬೋನಸ್, ಸೇವಾ ಅವಧಿ, ಮತ್ತಿತರ ಸೇವಾ ಸೌಲಭ್ಯಗಳನ್ನು ಮೊಟಕುಗೊಳಿಸುವುದು, ನೌಕರರ ಸಂಘಟನೆಗಳ ಸಾಮೂಹಿಕ ಚೌಕಾಸಿ ಹಕ್ಕುಗಳನ್ನು ಕಸಿದುಕೊಳ್ಳುವುದು, ಹೊಸ ನಿಗಮಗಳನ್ನು ರಚಿಸುವುದರೊಂದಿಗೇ ನೌಕರರ ಹೊಸ ಸೇವಾ ನಿಯಮಗಳನ್ನು ರೂಪಿಸಿ ಒಪ್ಪಿಗೆ ಇದ್ದವರು ಹೊಸ ನಿಗಮಗಳಲ್ಲಿ ಉಳಿಯಲಿ. ಇಲ್ಲವಾದರೆ ಉದ್ಯೋಗ ಬಿಟ್ಟು ಹೋಗಲಿ ಎಂಬ ದುರುದ್ದೇಶ ವಿಭಜನೆಯ ಹಿಂದೆ ಇದೆ! ಜೀವ ವಿಮಾ ನಿಗಮದಲ್ಲಿ ಆಗಾಗ ತಲೆದೋರುವ ಕಾರ್ಮಿಕ ಅಶಾಂತಿಯ ಸದ್ದಡಗಿಸುವುದೇ ವಿಭಜನೆಯ ಉದ್ದೇಶವಾಗಿದೆ!

ಕಾರ್ಮಿಕ ಅಶಾಂತಿ ಯಾಕೆ?

ಜೀವ ವಿಮಾ ಉದ್ಯಮದ ರಾಷ್ಟ್ರೀಕರಣಕ್ಕಾಗಿ ಅದರ ಎಲ್ಲಾ ವರ್ಗದ ನೌಕರರು ಹೋರಾಟ ನಡೆಸಿದುದೇ ಅಲ್ಲದೆ, ರಾಷ್ಟ್ರೀಕೃತ ಜೀವ ವಿಮಾ ನಿಗಮದ ವಿರುದ್ಧ ಅಪಪ್ರಚಾರಗಳೆಲ್ಲವನ್ನೂ ಎದುರಿಸಿಕೊಂಡು ಅದರ ಸರ್ವತೋಮುಖವಾದ ಅಭಿವೃದ್ಧಿಗೆ ತಮ್ಮ ಸಂಪೂರ್ಣ ಬೆಂಬಲ ನೀಡುತ್ತಾ ಬಂದರು. ಆದರೆ, ನಿಗಮದ ಪ್ರಗತಿ, ಅಭಿವೃದ್ಧಿ, ಲಾಭಗಳಿಕೆಗಳಿಗನುಗುಣವಾಗಿ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಬೆಲೆ ಏರಿಕೆ ಹಣ ದುಬ್ಬರಗಳ ವಿರುದ್ಧ ಜೀವನ ವೆಚ್ಚ ಸರಿದೂಗಿಸುವುದಕ್ಕಾಗಿ ನೌಕರರು ತಮ್ಮ ವೇತನ, ತುಟ್ಟಿಭತ್ತೆ, ಬೋನಸ್, ಮತ್ತಿತರ ಸೇವಾ ಸೌಲಭ್ಯಗಳನ್ನು ಉತ್ತಮಗೊಳಿಸಲು ಪ್ರತಿಹಂತದಲ್ಲಿಯೂ ಹೋರಾಟದ ಮಾರ್ಗವನ್ನೇ ಅವಲಂಬಿಸಬೇಕಾಗಿತ್ತು. ಜೀವ ವಿಮೆಯನ್ನು ಅರಾಷ್ಟ್ರೀಕರಣಗೊಳಿಸುವ, ನಿಗಮವನ್ನು ಕೇಂದ್ರೀಕರಿಸುವ ಮತ್ತು ವಿಭಜಿಸುವ, ವಿಭಾಗ ಹಾಗೂ ಶಾಖಾ ಕಛೇರಿಗಳನ್ನು ಮುಚ್ಚುವ, ಪಾಲಿಸಿದಾರರ ಸೇವೆಗೆ ಗಣಕ ಯಂತ್ರಗಳನ್ನು ಬಳಸುವ ಪ್ರಸ್ತಾಪ ಬಂದಾಗಲೆಲ್ಲಾ ನೌಕರರು ಆ ಧೋರಣೆಗಳ ವಿರುದ್ಧ ಹೋರಾಟದ ಮಾರ್ಗವನ್ನು ಹಿಡಿಯಬೇಕಾಯಿತು. ಅಖಿಲ ಭಾರತ ವಿಮಾ ನೌಕರರ ಮಹಾ ಸಂಘವು (AIIEA) ವಿಮಾ ನೌಕರರ ಮತ್ತು ಮಧ್ಯಮ ವರ್ಗದ ನೌಕರರ ಸಂಘಟಿತ ಹೋರಾಟಗಳಲ್ಲಿ ಮುಂಚೂಣಿ ಸ್ಥಾನವನ್ನು ಪಡೆದಿದ್ದು ಇಂದಿರಾ ಸರಕಾರಕ್ಕೆ ಸಹಿಸಲಾರದಾಗಿತ್ತು.

1956 ರಿಂದ 1974ರ ಅವಧಿಯಲ್ಲಿ ನೌಕರರು ಹೋರಾಟದ ಮಾರ್ಗದಿಂದ ತಮ್ಮ ಸೇವಾ ಸೌಲಭ್ಯಗಳ ಕುರಿತು ಸಾಮೂಹಿಕ ಚೌಕಾಸಿಯ ಮೂಲಕ ಹಲವಾರು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡಿದ್ದರು. ಆದರೆ, 1975-77ರ ತುರ್ತು ಪರಿಸ್ಥಿತಿಯನ್ನು ದುರುಪಯೋಗಿಸಿ ಇಂದಿರಾ ಸರಕಾರ ಜೀವ ವಿಮಾ ನೌಕರರ ದ್ವಿಪಕ್ಷೀಯ ಒಪ್ಪಂದಗಳನ್ನು ಅಲಕ್ಷಿಸಿ ಅವರ ಬೋನಸ್ ಹಕ್ಕನ್ನು ಕಿತ್ತು ಹಾಕಿತು. ಅಭಿವೃದ್ಧಿ ಅಧಿಕಾರಿಗಳ ಮೇಲೆ ಹೊರಲಾರದ ಉತ್ಪಾದನಾ ಸೂತ್ರವನ್ನು (work norms) ಹೊರಿಸಿತು. ಅಧಿಕಾರಿಗಳ ಬೋನಸ್, ತುಟ್ಟಿ ಭತ್ತೆ, ಸೇವಾ ಅವಧಿಯನ್ನು ಮೊಟಕುಗೊಳಿಸಿದುದೇ ಅಲ್ಲದೆ, ವೇತನ ಪರಿಷ್ಕರಣವನ್ನೂ ತಿರಸ್ಕರಿಸಿತು. ನೌಕರರು ತಮ್ಮ ಬೋನಸ್ ಹಕ್ಕಿನ ರಕ್ಷಣೆಗಾಗಿ ಪ್ರಬಲ ಹೋರಾಟ ಹೂಡಿದುದೇ ಅಲ್ಲದೆ, ಎರಡು ಸಲ ಸುಪ್ರೀಂ ಕೋರ್ಟಿನವರೆಗೆ ಹೋಗಿ ಆಡಳಿತದ ಮತ್ತು ಸರಕಾರದ ವಿರುದ್ಧ ಗೆದ್ದು ಬಂದರು. ಇದರ ಪ್ರಯೋಜನವನ್ನು ಅಧಿಕಾರಿಗಳ ಮತ್ತು ಅಭಿವೃದ್ಧಿ ಅಧಿಕಾರಿಗಳ ಸಂಘಗಳೂ ಪಡೆಯುವ ಸಾಧ್ಯತೆ ಸನ್ನಿಹಿತವಾಗಿತ್ತು. ಇಷ್ಟರಲ್ಲಿ ಸೋಲುಂಡ ಇಂದಿರಾ ಸರಕಾರ ಪ್ರತೀಕಾರದಿಂದ ದ್ವಿಪಕ್ಷೀಯ ಒಪ್ಪಂದಗಳನ್ನೂ, ಕಾರ್ಮಿಕ ಸಂಬಂಧಗಳ ಶಾಸನಗಳನ್ನೂ, ನ್ಯಾಯಾಲಯಗಳ ತೀರ್ಪುಗಳನ್ನೂ ಅಲಕ್ಷಿಸಿ ಎಲ್ಲಾ ವರ್ಗದ ನೌಕರರ ಸೇವಾ ಸೌಲಭ್ಯಗಳನ್ನು ತನಗೆ ಇಷ್ಟಬಂದಂತೆ ಏಕಪಕ್ಷೀಯವಾಗಿ ಪುನರ್‌ರಚಿಸುವ ಹಕ್ಕುಗಳಿರುವ ಜೀವ ವಿಮಾ ನಿಗಮದ ತಿದ್ದುಪಡಿ ಕಾಯಿದೆಯನ್ನು 1981 ರಲ್ಲಿ ಜ್ಯಾರಿಗೊಳಿಸಿತು. ಜೊತೆಗೇ ನೌಕರರ ಒಗ್ಗಟ್ಟನ್ನು ಮುರಿಯಲು, ಸಾಮೂಹಿಕ ಚೌಕಾಸಿಯ ಹಕ್ಕನ್ನು ಕಿತ್ತುಕೊಳ್ಳಲು ಜೀವವಿಮಾ ನಿಗಮವನ್ನು 4-5 ಪ್ರತ್ಯೇಕ ನಿಗಮಗಳನ್ನಾಗಿ ಪುನರ್ ರಚಿಸುವುದಾಗಿ ಘೋಷಿಸಿತು.

ಇಂತಹ ಕಾರ್ಮಿಕ ವಿರೋಧಿ ಹೀನ ಮಾರ್ಗವನ್ನು ಖಾಸಗೀ ರಂಗದ ಕೆಲವು ಸಂಸ್ಥೆಗಳು ಅನುಸರಿಸುವುದುಂಟು. ಎಲ್ಲಿ ಕಾರ್ಮಿಕ ಸಂಘಟನೆ ಪ್ರಬಲವಾಗಿದೆಯೋ ಅಂತಹ ಸಂಸ್ಥೆಯನ್ನು ಮುಚ್ಚಿಬಿಟ್ಟು ಅದೇ ಆಡಳಿತದವರು ಬೇರೆ ಹೆಸರಿನಲ್ಲಿ ಹೊಸ ಸಂಸ್ಥೆಯನ್ನು ಸ್ಥಾಪಿಸಿ ನೌಕರರನ್ನು ತಾವು ಹೋರಾಟಗಳಿಂದ ಗಳಿಸಿದ ಹಕ್ಕು ಭಾದ್ಯತೆಗಳಿಂದ, ಸುಧಾರಿತ ಸೇವಾ ಸೌಲಭ್ಯಗಳಿಂದ ವಂಚಿಸುವ ನಿದರ್ಶನಗಳಿವೆ. ಆದರೆ, 'ಸಮಾಜವಾದ'ದ ಮಂತ್ರವನ್ನು ಪ್ರತಿದಿನವೂ ಪಟಿಸುತ್ತಿರುವ ಇಂದಿರಾ ಸರಕಾರ ಬೃಹತ್ ಜೀವ ವಿಮಾ ನಿಗಮದ 55000ಕ್ಕೂ ಹೆಚ್ಚಿನ ನೌಕರರನ್ನು ಅವರು 25 ವರ್ಷಗಳಲ್ಲಿ ಹೋರಾಟಗಳ ಮೂಲಕ ದ್ವಿಪಕ್ಷೀಯ ಒಪ್ಪಂದಗಳಿಂದ ಗಳಿಸಿದ ಸೇವಾ ಸೌಲಭ್ಯಗಳಿಂದ ವಂಚಿಸುವ ಜೀವ ವಿಮಾ ನಿಗಮದ ವಿಭಜನೆಯ ಮುಂಬರುವ ಮಸೂದೆಯು ನಾಚಿಕೆಗೇಡು, ರಾಷ್ಟ್ರದ ಕಾರ್ಮಿಕ ಸಂಘಟನೆಗಳ ಆಂದೋಳನಕ್ಕೆ ಭಾರೀ ಅಪಾಯ.

(ಮುಂದಿನ ಸಂಚಿಕೆ ನೋಡಿ)

ಐತಿಹಾಸಿಕ ಹೊಣೆ ನಿರ್ವಹಿಸಲು ಕಾರ್ಮಿಕ ವರ್ಗ ಮುಂದಾಗಲಿ

(5ನೇ ಪುಟದಿಂದ)

ಮರೆಯಬಾರದು. ಕೊರತೆ ಹಣಕಾಸಿನ ಮೂಲಕ ಹಣದುಬ್ಬರವನ್ನು ಜನತೆಯ ಮೇಲೆ ಸರ್ಕಾರ ಹೇರಿ, ಕಾರ್ಮಿಕ ಅಧಿಕ ಉತ್ಪಾದನೆ ಮಾಡಿದರೆ ಬೆಲೆಗಳು ಇಳಿಯುತ್ತವೆ ಎಂದು ಅಪಪ್ರಚಾರ ಮಾಡುತ್ತಿದೆ. ಇದೇ ಸಂದರ್ಭದಲ್ಲಿ ಸಕ್ಕರೆಯ ಉತ್ಪಾದನೆ ದಾಖಲೆ ಪ್ರಮಾಣದಲ್ಲಿ ಅಧಿಕಗೊಂಡಿದ್ದರೂ ಬೆಲೆಗಳು ಏಕೆ ಇಳಿದಿಲ್ಲ ಎನ್ನುವುದಕ್ಕೆ ಸರ್ಕಾರದ ಬಳಿ ಉತ್ತರವಿಲ್ಲ.

ಈ ಅಪಪ್ರಚಾರಕ್ಕೆ ಸರಿಯಾದ ಉತ್ತರವನ್ನು ಕಾರ್ಮಿಕ ವರ್ಗ ಕೊಡಬೇಕಾಗಿದೆ. ಸಾಮಾಜಿಕ ಅವಶ್ಯಕತೆಯನ್ನು ಪೂರೈಸುವಲ್ಲಿ ಮತ್ತು ಉತ್ಪಾದನೆಯನ್ನು ಅಧಿಕಗೊಳಿಸುವ ಜವಾಬ್ದಾರಿಯನ್ನು ಕಾರ್ಮಿಕ ಹಾಗೂ ಕಾರ್ಮಿಕ ಸಂಘಟನೆಗಳು ತಪ್ಪಿಸಿಕೊಳ್ಳಲಿಚ್ಛಿಸುವುದಿಲ್ಲ. ಸಮಾನತೆಯ ಆಧಾರದ ಮೇಲೆ ಮತ್ತು ಕಾರ್ಮಿಕರ ಎಲ್ಲ ಹಕ್ಕುಗಳೊಂದಿಗೆ ಈ ಜವಾಬ್ದಾರಿಯನ್ನು ಹೊರಲು ಪುನಃ ಪುನಃ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿದೆ. ಆದರೆ ಇದುವರಗಿನ ನಮ್ಮ ಅನುಭವ ಕಹಿಯಾಗಿಯೇ ಇದೆ.

ಮುಷ್ಕರ ಮತ್ತು ಬೀಗ ಮುದ್ರೆಗಳು

ನಮ್ಮ ಇತ್ತೀಚಿನ ಜನರಲ್ ಕೌನ್ಸಿಲ್ ನಡೆದಿಂದೀಚೆಗೆ ಮಾಲೀಕರು ಮತ್ತು ಕಾರ್ಮಿಕ ಸಂಘಟನೆಗಳ ನಡುವೆ ತೀವ್ರತರದ ಬಿಕ್ಕಟ್ಟು ಒದಗಿದೆ. ಆರು ತಿಂಗಳಿನಿಂದಲೂ ನಡೆಯುತ್ತಿರುವ ಮುಂಬೈ ಗಿರಣಿ ಕಾರ್ಮಿಕರ ಮುಷ್ಕರ, ರಾಜಾಸ್ತಾನದ ವಿದ್ಯುಚ್ಛಕ್ತಿ ಕಾರ್ಮಿಕರ ಮುಷ್ಕರ, ರಾಜ್ಯ ಸರ್ಕಾರಿ ನೌಕರರುಗಳ ಮುಷ್ಕರಗಳು ಇದನ್ನು ಸೂಚಿಸುತ್ತದೆ.

ಸಾಮಾನ್ಯವಾಗಿ ಹಾಳಾದ ಉತ್ಪಾದಿತ ದಿನಗಳಿಗೆ ಮುಷ್ಕರಗಳೇ ಕಾರಣವೆಂದು ಪ್ರಚಾರ ಮಾಡಲಾಗುತ್ತದೆ. ಆದರೆ ಶೇಖಡ 40 ಹಾಳಾದ ಉತ್ಪಾದಿತ ದಿನಗಳಿಗೆ ಬೀಗ ಮುದ್ರೆ ಕಾರಣವಾಗಿದೆ. ಕಾರ್ಮಿಕರನ್ನು ಬಗ್ಗುಬಡಿಯಲು ಈ ಅಸ್ತ್ರವನ್ನು ಬಳಸಲಾಗುತ್ತಿದೆ.

ಬದಲಿ ಕಾರ್ಮಿಕರು

ಹಲವಾರು ಶಾಸನಗಳು ಬಂದಿದ್ದರೂ ಲಕ್ಷಾಂತರ ಕಾರ್ಮಿಕರನ್ನು ತಾತ್ಕಾಲಿಕ ನೌಕರರೆಂದು ಪರಿಗಣಿಸಲಾಗುತ್ತಿದೆ. ಮುಂಬೈ ಗಿರಣಿ ಕಾರ್ಮಿಕರ ಮುಷ್ಕರ ಈ ಪ್ರಮುಖ ಬೇಡಿಕೆಯನ್ನೊಳಗೊಂಡಿದೆ. ಲಕ್ಷಾಂತರ ಕಾರ್ಮಿಕರ ಭವಿಷ್ಯದ ಪ್ರಶ್ನೆಯಾದುದರಿಂದ CITU ಈ ಸಮಸ್ಯೆಗೆ ಪ್ರಾಮುಖ್ಯತೆ ಕೊಡಬೇಕು.



ವೇದಿಕೆಯ ದೃಶ್ಯ. ಎಡದಿಂದ : ಕಾಂ| ಸೂರ್ಯನಾರಾಯಣರಾವ್, ಕಾಂ| ಇ. ಬಾಲಾನಂದನ್, ಕಾಂ| ಜ್ಯೋತಿ ಬಸು, ಕಾಂ| ಬಿ.ಟಿ ಆರ್. ಮತ್ತು ಕಾಂ| ಮನೋರಂಜನ್ ರಾಯ್.

ಐ ಎಲ್ ಓ ಶಿಫಾರಸುಗಳ ಉಲ್ಲಂಘನೆ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO)ಯ ಶಿಫಾರಸುಗಳನ್ನು ಒಂದಾದ ಮೇಲೊಂದರಂತೆ ಭಾರತ ಸರ್ಕಾರ ಉಲ್ಲಂಘಿಸುತ್ತಿದೆ. ಪುರೋಗಾಮಿ ಮುಖವಾಡವನ್ನು ಪ್ರದರ್ಶಿಸಲು ಈ ಶಿಫಾರಸುಗಳಿಗೆ ಸಹಿ ಹಾಕುತ್ತಿದೆ. ಪ್ರಸ್ತುತ ಕಾರ್ಮಿಕ ಶಾಸನಗಳು ಹಲವಾರು ತಪ್ಪಿಸಿಕೊಳ್ಳುವ ಉಪಾಯಗಳನ್ನು ಹೊಂದಿದ್ದು ಸೀಮಿತ ಅನುಕೂಲಗಳೂ ಕಾರ್ಮಿಕರಿಗೆ ದೊರೆಯುತ್ತಿಲ್ಲ. ಇದರಿಂದಾಗಿ ಬದಲಿ ಕಾರ್ಮಿಕರು ಬದಲಿ ಕಾರ್ಮಿಕರಾಗಿಯೇ ಉಳಿದು ಅವರ ಭವಿಷ್ಯ ಕರಾಳವಾಗಿದೆ.

ಕಾರ್ಮಿಕರಿಗೆ ದೊರೆಯುತ್ತಿರುವ ವೈದ್ಯಕೀಯ ಸೌಲಭ್ಯ ಅತ್ಯಂತ ಕನಿಷ್ಟವಾಗಿದ್ದು ರೋಗಗ್ರಸ್ಥವಾಗಿದೆ. E.S.I. ಸೌಲಭ್ಯ ಕೆಲವೇ ಕಾರ್ಮಿಕರಿಗೆ ಸೀಮಿತವಾಗಿದೆ.

ಮಹಿಳಾ ಕಾರ್ಮಿಕರು

ನಮ್ಮ ಅನೇಕ ಸಂಘಗಳು ಮಹಿಳಾ ಕಾರ್ಮಿಕರ ಸಮಸ್ಯೆಯತ್ತ ಗಮನ ಹರಿಸುತ್ತಿರುವುದು ಸಂತೋಷಕರ ವಿಷಯ. ಇದನ್ನು ಎಲ್ಲ ಸಂಘಗಳು ರಾಜ್ಯ ಸಮಿತಿಗಳು ಮಾಡುತ್ತಿವೆ ಎಂದು ಹೇಳುವಂತಿಲ್ಲ. ಆದಾಗ್ಯೂ ಮಹಿಳಾ ಕಾರ್ಮಿಕರು ಮುಂದೆ ಬರುತ್ತಿದ್ದಾರೆ. ತಮ್ಮ ಹಕ್ಕುಗಳ ಬಗ್ಗೆ ಮನವರಿಕೆಯಾಗಿದ್ದು ನಾಯಕತ್ವವನ್ನು ಪಡೆಯುವಲ್ಲೂ ಮುಂದಾಗಿದ್ದಾರೆ. ಕಾರ್ಲ್ ಮಾರ್ಕ್ಸ್‌ನ ಮಾತುಗಳನ್ನು ನಿಮಗೆ ನೆನಪಿಸುತ್ತೇನೆ. "ಮಹಿಳಾ ಕ್ಷೋಭೆಯಿಲ್ಲದೆ ಯಾವುದೇ ಮಹಾನ್ ಜನಪರ ಹೋರಾಟವು ಸಾಧ್ಯವಾಗುವುದಿಲ್ಲ."

ಜನವರಿ 19ರ ಮುಷ್ಕರ

CITU ಸತತವಾಗಿ ಪ್ರಯತ್ನ ಪಡುತ್ತಿರುವ ಸಾಮೂಹಿಕ ಐಕ್ಯ ಕಾರ್ಯಾಚರಣೆ ಮತ್ತು ಕಾರ್ಮಿಕ ಸಂಘಟನೆಗಳ ಐಕ್ಯತೆಗಾಗಿ ಒಲವು ಕಳೆದ ವರ್ಷದಲ್ಲಿ ಕಾಣಿಸಿದೆ. ಈ ಬೆಳವಣಿಗೆ ಕಾರ್ಮಿಕ ಸಂಘಟನೆಗಳ ಐಕ್ಯತೆಯ ಸಾಧ್ಯತೆಗಳು ಮತ್ತು ಮಿತಿಗಳನ್ನು ತೋರಿಸಿದೆ

ಹಿಂದೆಂದೂ ಕಂಡರಿಯದ ಕಾರ್ಮಿಕ ಸಂಘಟನೆಗಳ ಐಕ್ಯತೆ, ಕಾರ್ಮಿಕ ವರ್ಗದ ಸಂಘಟಿತ ಶಕ್ತಿ ಮತ್ತು ಅಧಿಕಾರಿಶಾಹಿಯ ವಿರುದ್ಧ ಸಮೂಹಿಕ ಪ್ರಜಾಸತ್ತಾತ್ಮಕ ಕಾರ್ಯಚಾರಣೆಯ ಸಾಧ್ಯತೆಗಳನ್ನು ಜನವರಿ 19ರ ಮುಷ್ಕರ ಮನವರಿಕೆ ಮಾಡಿದೆ. ಈ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಬೇಡಿಕೆಗಳ ಜೊತೆ ಪ್ರಜಾಪ್ರಭುತ್ವದ ಬೇಡಿಕೆ ಮತ್ತು ದುರ್ಬಲ ವರ್ಗಗಳ ಜೀವನ ನಿರ್ವಹಣೆಗಾಗಿನ ಬೇಡಿಕೆಗಳನ್ನು ಮುಂದಿಡಲಾಯಿತು.

ದುಡಿಯುವ ವರ್ಗದ ಬೇಡಿಕೆಗಳೊಂದಿಗೆ ರೈತಾಪಿ ಜನಗಳ ಬೇಡಿಕೆಗಳನ್ನು ಸಮ್ಮಿಳಿತಗೊಳಿಸಲಾಯಿತು. ಈ ಪ್ರಜ್ಞೆಯನ್ನು ಮುಂದಕ್ಕೆ ಕೊಂಡೊಯ್ಯುವುದಾದರೆ ಇದೊಂದು ಪ್ರಮುಖ ರಾಜಕೀಯ ಬೆಳವಣಿಗೆಯಾಗುತ್ತದೆ.

ಈ ಮುಷ್ಕರದ ನಿಶ್ಯಕ್ತಿಯೆಂದರೆ ಇದರಲ್ಲಿ ರೈಲ್ವೇ ಮತ್ತಿತರ ಕೇಂದ್ರ ಸರ್ಕಾರದ ನೌಕರರು ಭಾಗವಹಿಸದಿರುವುದು. ಇವುಗಳ ಸುಧಾರಣಾವಾದಿ ನಾಯಕ ವರ್ಗ ಸರಿಯಾದ ನಿಲುವು ತೆಗೆದುಕೊಳ್ಳದಿರುವುದು ದುರದೃಷ್ಟಕರ. ಆದರೆ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಗಳಲ್ಲಿ ಈ ವಿಭಾಗಗಳು ಭಾಗವಹಿಸಿದವು. ಈ ಸಂಭಂಧದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಈ ವಿಭಾಗಗಳ ನಾಯಕರುಗಳೊಂದಿಗೆ ಮಾತುಕತೆ ನಡೆಸಿ ಐಕ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕಾಗಿದೆ.

ತುರ್ತು ಪರಿಸ್ಥಿತಿಯು ಕಾರ್ಮಿಕ ಚಳುವಳಿ ಬಹಿರಂಗವಾಗಿ ಇಬ್ಭಾಗವಾಗುವಂತೆ ಮಾಡಿತು. INTUC ಮತ್ತು AITUC ನಾಯಕ ವರ್ಗ ಆಳುವ ಪಕ್ಷದ ಹಿಂಬಾಲಕವಾದರೆ ಇನ್ನುಳಿದ ಸಂಘಟನೆಗಳು ಕಾರ್ಮಿಕ ವರ್ಗದ ಮೇಲಿನ ಧಾಳಿಯನ್ನು ಪ್ರತಿಭಟಿಸಿದವು. ಪರಿಸ್ಥಿತಿ ಪುನಃ ಬದಲಾಗಿ ಜನತಾ ಆಳ್ವಿಕೆ ಸಮಯದಲ್ಲಿ ತಂದ ಕೈಗಾರಿಕಾ ಸಂಬಂಧ ಮಸೂದೆಯನ್ನು ಎಲ್ಲ ಸಂಘಟನೆಗಳು ವಿರೋಧಿಸಿದವು. INTUC ಬಿಟ್ಟು ಮಿಕ್ಕೆಲ್ಲ ಸಂಘಟನೆಗಳ ನಡುವೆ ಈ ಐಕ್ಯತೆ ಮುಂದುವರಿಯುತ್ತಿದೆ. ಇದಕ್ಕೆ ಕಾರಣವೆಂದರೆ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸಮಾಜದ ಎಲ್ಲ ವರ್ಗಗಳು ದಾಳಿಗೆ ತುತ್ತಾಗಿ, ಬೆಲೆ ಏರಿಕೆ, ಹಣ ದುಬ್ಬರ ಮುಂತಾದವುಗಳನ್ನು ಯಾವುದೇ ಒಂದು ಸಂಘಟನೆ ಎದುರಿಸಲು ಅಸಾಧ್ಯವಾಗಿದೆ.

ಕಾರ್ಮಿಕ ಚಳುವಳಿಯು ಒಂದು ವರ್ಗ ಡೋಲಾಯಮಾನವಾಗಿದ್ದರೂ ಆರ್ಥಿಕ ಸಂಕಷ್ಟಗಳ ಅನಿವಾರ್ಯತೆಯಿಂದಾಗಿ ಐಕ್ಯ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುತ್ತಿವೆ. ಈ ಆರ್ಥಿಕ ಅನಿವಾರ್ಯತೆಯ ತತ್ವದ ಆಧಾರದ ಮೇಲೆ CITU ಕೆಲಸ ಮಾಡುತ್ತಿದೆ. ಮತ್ತು ಈ ಹೋರಾಟಗಳು ವರ್ಗ ಹೋರಾಟಗಳಾಗಿ ಪರಿವರ್ತಿತವಾಗುವಂತೆ ಗಮನ ನೀಡುತ್ತಿದೆ. ಬೆಳೆದು ಬರುತ್ತಿರುವ ಐಕ್ಯ ಹೋರಾಟವನ್ನು ವಿಫಲಗೊಳಿಸಲು ಕೆಲ ಶಕ್ತಿಗಳು ಒಳಗಿನಿಂದಲೂ ಕೆಲಸ ಮಾಡುತ್ತಿವೆ. ಇದರ ಬಗ್ಗೆ ಎಚ್ಚರವಿರಬೇಕು.

ಪ್ರಸ್ತುತ ಸಂದರ್ಭದಲ್ಲಿ ಹೆಚ್ಚಿನ ಐಕ್ಯತೆ ಅವಶ್ಯಕವಾಗಿದ್ದು ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ಮತ್ತು ಫೆಡರೇಷನ್‌ಗಳ ಮಹಾ ಒಕ್ಕೂಟ CITU ಕರೆಯನ್ನು ಪುನರುಚ್ಚರಿಸುತ್ತದೆ. ಚಳುವಳಿಗೆ ಸಂಬಂಧಿಸಿದಂತೆ ಸರ್ವಾನುಮತದ ನಿರ್ಣಯಗಳ ಮೂಲಕ ಕೆಲಸ ಮಾಡುವಂತೆ ಈ ಒಕ್ಕೂಟ ಕೆಲಸಮಾಡಬೇಕು. ಈ ದಿಕ್ಕಿನಲ್ಲಿ CITU ಕೆಲವು ಪ್ರಸ್ತಾಪನೆಗಳನ್ನು ಮಾಡಬೇಕಾಗಿದೆ.

ಒಡನಾಡಿಗಳೇ - ಮುಂಬರುವ ದಿನಗಳು ನಮ್ಮ ಚಳುವಳಿಗೆ ಪ್ರತಿರೋಧಕವಾಗಿವೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಡುವೆ ನಾವಿದ್ದು ಹಿಂದೆಂದೂ ಕಾಣದ ಹಣದುಬ್ಬರ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ನಮ್ಮ ಆರ್ಥಿಕ ವ್ಯವಸ್ಥೆ ಪಶ್ಚಿಮ ರಾಷ್ಟ್ರಗಳ ಮೇಲೇ ಅವಲಂಬಿಸಿದ್ದು ಆರ್ಥಿಕ ಬಿಕ್ಕಟ್ಟು ಇಲ್ಲೂ ತೀವ್ರವಾಗಲಿದೆ. ಈ ಪರಿಸ್ಥಿತಿಯಿಂದ ಹೊರಬರಲು ಭಾರತ ಸರ್ಕಾರ ಪಶ್ಚಿಮ ದೇಶಗಳು ಮತ್ತು IMF ನಿಂದ ಭಾರಿ ಸಾಲ ಪಡೆಯುತ್ತಿದೆ. ಇದರಿಂದಾಗಿ ಬಹು ರಾಷ್ಟ್ರೀಯ ಸಂಸ್ಥೆಗಳ ನೇರ ದಾಳಿಗೆ ಒಳಗಾಗಿದ್ದೇವೆ. ಈ ಸಮಸ್ಯೆಯನ್ನೆದುರಿಸುವ ಐತಿಹಾಸಿಕ ಹೊಣೆಯನ್ನು ನಮ್ಮ ಎಲ್ಲ ಕಾರ್ಮಿಕ ಸಂಘಟನೆಗಳು ಮನಗಾಣುತ್ತವೆಂದು ಆಶಿಸೋಣ.

ಚಿಂತಾಮಣಿ :

ಕೋಲಾರ ಜಿಲ್ಲಾ ರೈತ ಸಂಘದ ೭ನೇ ಸಮ್ಮೇಳನ

ಚಿಂತಾಮಣಿಯಲ್ಲಿ 17-7-82 ರಂದು ಕೋಲಾರ ಜಿಲ್ಲಾ ರೈತ ಸಂಘದ 7ನೆ ಸಮ್ಮೇಳನ ಜರುಗಿತು.

ಸಮ್ಮೇಳನದ ಕಲಾಪಗಳನ್ನು ಕಾಂ| ಆರ್. ವೆಂಕಟರಾಮಯ್ಯ, ಎಸ್. ಲಕ್ಷ್ಮಯ್ಯ ಮತ್ತು ಕಾಂ| ಶ್ರೀನಿವಾಸರೆಡ್ಡಿಯವರನ್ನೊಳಗೊಂಡ ಅಧ್ಯಕ್ಷ ಮಂಡಳಿಯು ನಿರ್ವಹಿಸಿತು.

ಸಮ್ಮೇಳನವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ| ಪಿ ರಾಮಚಂದ್ರರಾವ್ ಅವರು ಉದ್ಘಾಟಿಸಿದರು. ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ, ಖಜಾಂಚಿ ಕಾಂ| ಪಿ. ಜಗನ್ನಾಥ ಅತಿಥಿಗಳಾಗಿ ಆಗಮಿಸಿದ್ದರು.

ಕಾಂ| ಪಿ. ರಾಮಚಂದ್ರರಾವ್ ಅವರು ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಾ, ತುಳಿತಕ್ಕೆ ಸಿಕ್ಕಿರುವ ರೈತ ವರ್ಗದ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಬಲ ಚಳುವಳಿ ಸಂಘಟಿಸಬೇಕೆಂದು ಪ್ರತಿನಿಧಿಗಳಿಗೆ ಕರೆ ನೀಡಿದರು. ಆಗಸ್ಟ್ ಕೊನೆಯ ವೇಳೆಗೆ ನಡೆಯಲಿರುವ 'ವಿಧಾನ ಸೌಧ ಚಲೋ' ಕಾರ್ಯಕ್ರಮ, ಸರಕಾರಕ್ಕೆ ಸಲ್ಲಿಸಲಿರುವ ಮಹಾಮನವಿಗೆ ಸಹಿ ಸಂಗ್ರಹ ಕೆಲಸವನ್ನು ಯಶಸ್ವಿಯಾಗಿ ಪೂರೈಸಬೇಕೆಂದು ವಿನಂತಿಸಿದರು.

ಸಮ್ಮೇಳನಕ್ಕೆ ಜಿಲ್ಲೆಯಾದ್ಯಂತದಿಂದ 100 ಜನ ಪ್ರತಿನಿಧಿಗಳು ಆಗಮಿಸಿದ್ದರು.

ಸಮ್ಮೇಳನವು ಈ ಕೆಳಕಂಡವರನ್ನು ನೂತನ ಪದಾಧಿಕಾರಿಗಳಾಗಿ ಚುನಾಯಿಸಿತು.

ಅಧ್ಯಕ್ಷರಾಗಿ ಕಾಂ| ಆರ್. ವೆಂಕಟ್ರಾಮಯ್ಯ, ಉಪಾಧ್ಯಕ್ಷರುಗಳಾಗಿ ಕಾಂ| ಎ. ವಿ. ಅಪ್ಪುಸ್ವಾಮಿರೆಡ್ಡಿ ಮತ್ತು ಕಾಂ| ಎಸ್. ಲಕ್ಷ್ಮಯ್ಯ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ಲಕ್ಷ್ಮಣರೆಡ್ಡಿ, ಕಾರ್ಯದರ್ಶಿಯಾಗಿ ಕಾಂ| ಕೆ. ಎಂ. ವೆಂಕಟೇಶ್, ಖಜಾಂಚಿಯಾಗಿ ತುಕಾರಾಂ ವಡಗೂರು ಇವರುಗಳಲ್ಲದೇ ಪ್ರತಿ ತಾಲ್ಲೂಕಿನಿಂದ ಇಬ್ಬಿಬ್ಬರನ್ನು ಕಾರ್ಯಕಾರಿ ಸಮಿತಿಗೆ ಚುನಾಯಿಸಲಾಯಿತು.

ಸಮ್ಮೇಳನ ಕೈಗೊಂಡ ತೀರ್ಮಾನಗಳು :

(1) ರೈತರ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರೆಯಬೇಕು.

(2) ಹೆಚ್ಚುವರಿ ಮತ್ತು ಬಂಜರು ಜಮೀನನ್ನು ಬಡರೈತರಿಗೆ, ಭೂಹೀನರಿಗೆ ಹಂಚಬೇಕು.

(3) ಕೃಷಿ ಕಾರ್ಮಿಕರಿಗೆ ನಿವೃತ್ತಿ ವೇತನ ಕೊಡಬೇಕು.

(4) ಬಡರೈತರ ಸಾಲ ರದ್ದಾಗಬೇಕು.

(5) ಬರಗಾಲ ಪೀಡಿತ ಕೋಲಾರ ಜಿಲ್ಲೆಗೆ ಶಾಶ್ವತ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

(6) ಹತ್ತು ಎಕರೆಗಿಂತ ಕಡಿಮೆ ಹಿಡುವಳಿ ಜಮೀನಿಗೆ ಕಂದಾಯ ರದ್ದು ಮಾಡಬೇಕು.

(7) ಜಿಲ್ಲೆಯಲ್ಲಿ ನೀರಿನ ಕಂದಾಯ ರದ್ದಾಗಬೇಕು.

(8) ರೇಷ್ಮೆ ಬೆಳೆಗಾರರಿಗೆ ಮಾರಕವಾಗಿರುವ ರೇಷ್ಮೆ ಆಮದನ್ನು ನಿಲ್ಲಿಸಬೇಕು. ಇತ್ಯಾದಿ...

ಕರಾಳ ಶಾಸನಗಳ ವಿರುದ್ಧ ಐಕ್ಯ ಹೋರಾಟಕ್ಕೆ ಕರೆ



ಜುಲೈ 25 ರಂದು ನಡೆದ ಮೆರವಣಿಗೆಯ ದೃಶ್ಯ.

(1ನೇ ಪುಟದಿಂದ)

ರೀತಿಯಲ್ಲಿ ಬೆಳೆಯುತ್ತಿರುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸಿ.ಐ.ಟಿ.ಯು. ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆ ಸೇರಿದ್ದು ಅತ್ಯಂತ ಮಹತ್ವದ್ದು ಎಂದರು.

ನಂತರ ಕಾಂ| ಸೂರ್ಯನಾರಾಯಣ ರಾವ್ ಮಾತನಾಡುತ್ತಾ ಆಗೆಸ್ಟ್ 12 ರಂದು ಸಿ.ಐ.ಟಿ.ಯು. ಕಾರ್ಯಕಾರೀ ಸಮಿತಿಯು ಕರೆಯಂತೆ ಕಳೆದ 7 ತಿಂಗಳಿಂದ ಧೀರ ಹೋರಾಟ ನಿರತ ಟೆಕ್ಸ್‌ಟೈಲ್ಸ್ ಕಾರ್ಮಿಕರ ಬೆಂಬಲಾರ್ಥವಾಗಿ ನಡೆಯಲಿರುವ ಮತಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಬೇಕೆಂದು ಮನವಿ ಮಾಡುತ್ತಾ ಈ ಕಾರ್ಯಕ್ರಮಕ್ಕೆ ಇತರ ಕಾರ್ಮಿಕ ಸಂಘಟನೆಗಳೂ ಪಾಲ್ಗೊಳ್ಳಬೇಕೆಂದು ವಿನಂತಿಸಿದರು.

ನಂತರ ಕಾಂ| ಜ್ಯೋತಿಬಸು ಅವರು ಮಾತನಾಡುತ್ತಾ, ಕಾಂಗ್ರೆಯ ಅನೇಕ ಕುತಂತ್ರಗಳನ್ನು ಎದುರಿಸಿಯೂ ಪ. ಬಂಗಾಲದ ಜನತೆ ಪುನಃ ಎಡರಂಗವನ್ನು ಆರಿಸಿ ತಂದಿರುವುದು, ಎಡರಂಗದ ಕಾರ್ಯದಕ್ಷತೆಯ ನಿದರ್ಶನ ಎಂದರು.

ಎಡ ರಂಗ ಸರಕಾರದ ಸಾಧನೆ

1977ರಲ್ಲಿ ಅಧಿಕಾರಕ್ಕೆ ಬಂದ ಎಡರಂಗ ಸರಕಾರ ಪ್ರತಿಯೊಂದು ರಂಗದಲ್ಲೂ ಕೈಗೊಂಡ ಸಾಧನೆಗಳನ್ನು ವಿವರಿಸಿದ ಕಾಂ| ಬಸು, ಜನತೆಯ ಹಿತ ಸಾಧನೆಗಾಗಿ ಕೈಗೊಂಡ ನಿರ್ದಿಷ್ಟ ಕಾರ್ಯಕ್ರಮಗಳ ಕುರಿತು ತಿಳಿಸಿದರು.

ದುಡಿಯುವ ಜನಕೋಟಿಯ ಹಕ್ಕುಗಳ ರಕ್ಷಣೆಗಾಗಿಕೈಗೊಂಡಿರುವ ಅನೇಕ ಕ್ರಮಗಳನ್ನು ವಿವರಿಸಿದ ಕಾಂ| ಜ್ಯೋತಿಬಸು, ಸಂಘ ಸ್ಥಾಪಿಸಿಕೊಳ್ಳಲು ರಾಜ್ಯ ಸರಕಾರಿ ನೌಕರರು, ಪೋಲಿಸ್ ಇಲಾಖೆ ನೌಕರರು, ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಿಡಿದು ಎಲ್ಲಾ ಹಂತಗಳವರೆಗಿನ ಉಪಾಧ್ಯಾಯರುಗಳಿಗೆ ಸಂಘ ಸ್ಥಾಪಿಸಿಕೊಳ್ಳಲು ಎಡರಂಗ ಸರಕಾರ ಅವಕಾಶ ನೀಡಿದೆ ಎಂದರು.

ತಮ್ಮ ತಮ್ಮ ನ್ಯಾಯಯುತ ಬೇಡಿಕೆಗಳಿಗೋಸ್ಕರ ಕಾರ್ಮಿಕರು, ನೌಕರರು ಮತ್ತಿತರ ದುಡಿಯುವ ವರ್ಗಗಳು ಹೋರಾಟಕ್ಕೆ ಇಳಿದಾಗ ಸರಕಾರ ಅವರ ಹೋರಾಟಗಳನ್ನು ಬೆಂಬಲಿಸುತ್ತದೆ ಎಂದು ಕಾಂ| ಬಸು ತಿಳಿಸಿದರು.

ವಿಕೃತ ಪ್ರಚಾರ

ಜನಪ್ರಿಯ ಎಡರಂಗ ಸರಕಾರದ ವಿರುದ್ಧ ಸತತವಾಗಿ ಎಲ್ಲಾ ಪ್ರಚಾರ ಮಾಧ್ಯಮಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ದೂಷಿಸಿದ ಕಾಂ| ಬಸು ನಿದರ್ಶನವಾಗಿ ಕೆಲವು ಪತ್ರಿಕಾ ವರದಿಗಳನ್ನು ಗಮನಕ್ಕೆ ತಂದರು.

ಇತ್ತೀಚೆಗೆ ನಡೆದ (ಮೇ 19) ಚುನಾವಣೆಗಳಲ್ಲಿ ವಂಚನೆ ನಡೆದಿದೆ ಎಂದು ಹೇಳಿ, ಈ ಬಗ್ಗೆ ತನಿಖೆ ನಡೆಸಬೇಕೆಂದು ಪ. ಬಂಗಾಲ ರಾಜ್ಯಪಾಲರು ಕೇಂದ್ರಕ್ಕೆ ವರದಿ ಸಲ್ಲಿಸಿದ್ದಾರೆ ಎಂಬ ಪತ್ರಿಕಾ ವರದಿಯನ್ನು ಪ್ರಸ್ತಾಪಿಸುತ್ತಾ ಕಾಂ|| ಜ್ಯೋತಿಬಸು ಅವರು ಇದು ಅಪ್ಪಟ ಸುಳ್ಳು ಎಂದು ಬಣ್ಣಿಸಿದರು.

ಕಲ್ಕತ್ತೆಯಲ್ಲಿ ಇತ್ತೀಚೆಗೆ ನಡೆದಿರುವ ಕೆಲವು ಬ್ಯಾಂಕ್ ದರೋಡೆ ಪ್ರಕರಣಗಳಲ್ಲಿ ಸಿ. ಪಿ. ಐ. (ಎಂ) ಕಾರ್ಯಕರ್ತರ ಪಾತ್ರವಿದೆಯೆಂಬ ಪತ್ರಿಕಾ ವರದಿಗಳನ್ನು ಕಟುವಾಗಿ ಖಂಡಿಸುತ್ತಾ, ಪ. ಬಂಗಾಲದಲ್ಲಿ ನಡೆಯುತ್ತಿರುವ ವಾಸ್ತವ ಸಂಗತಿಗಳೇನು ಎಂಬುದನ್ನು ಕರ್ನಾಟಕ ಜನತೆ ಅರಿಯಬೇಕಾದುದು ಅತಿ ಮುಖ್ಯ ಎಂದು ಒತ್ತಿಹೇಳಿದರು.

ಮಲತಾಯಿ ಧೋರಣೆ

ಪ. ಬಂಗಾಳದ ಕೆಲವು ಜಿಲ್ಲೆಗಳಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಇದೆ. ಕೇಂದ್ರ ಸರಕಾರ ಸಕಾಲದಲ್ಲಿ ಆಹಾರ ಧಾನ್ಯ ಬಿಡುಗಡೆಮಾಡದೇ ಮಲತಾಯಿ ದೋರಣೆ ಅನುಸರಿಸುತ್ತಿದೆ ಎಂದು ಟೀಕಿಸಿದರು.

ಸರ್ವಾಧಿಕಾರಿ ಶಕ್ತಿಗಳಿಗೆ ಪರ್ಯಾಯವಾಗಿರುವುದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ ಎಂದ ಕಾಂ|| ಜ್ಯೋತಿಬಸು ಈ ಶಕ್ತಿಗಳನ್ನು ಬಲಪಡಿಸುವಂತೆ ಕರೆ ನೀಡಿದರು.

ಯುದ್ಧದ ಅಪಾಯ

ನಂತರ ಸಭೆಯನ್ನುದ್ದೇಶಿಸಿ ಕಾಂ|| ಬಿ ಟಿ. ರಣದಿವೆಯವರು ಮಾತನಾಡುತ್ತಾ ಜಾಗತಿಕ ಶಾಂತಿಗೆ ಸಾಮ್ರಾಜ್ಯಶಾಹಿಗಳಿಂದ ಒದಗಿರುವ ಅಪಾಯ ಕುರಿತು ವಿವರಿಸಿದರು.

ಬೃಹತ್ ಪ್ರಮಾಣದಲ್ಲಿ ಅಣುಅಸ್ತ್ರಗಳನ್ನು ತಯಾರಿಸುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಕಟುವಾಗಿ ಟೀಕಿಸಿದ ಕಾಂ|| ಬಿ. ಟಿ. ಆರ್. ಈ ಅಪಾಯದ ವಿರುದ್ಧ ಜಾಗೃತರಾಗಬೇಕೆಂದು ಕರೆನೀಡಿದರು..

ಅಂತರರಾಷ್ಟ್ರೀಯ ಪರಿಸ್ಥಿತಿ ಕುರಿತು ಮಾತನಾಡುತ್ತಿದ್ದ ಕಾಂ|| ಬಿ.ಟಿ.ಆರ್. ಅವರು ಇತ್ತೀಚೆಗೆ ಲೆಬನಾನ್ ಮೇಲೆ ಅಮೇರಿಕಾ (USA)ಪ್ರೇರಿತ ಇಸ್ರೇಲಿ ಆಕ್ರಮಣವನ್ನು ಖಂಡಿಸಿದರು. ಸಾಮಾನ್ಯ ಜನತೆಯಲ್ಲಿ ಯುದ್ಧ ಅಪಾಯದ ಅರಿವನ್ನುಂಟುಮಾಡಲು WFTU ಕರೆಯ ಮೇರೆಗೆ ಸೆಪ್ಟೆಂಬರ್ 1 ರಂದು 'ಯುದ್ಧ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಿದರು.

ಕಾರ್ಮಿಕ ವರ್ಗದ ಮೇಲೆ ಪ್ರಹಾರ

ನಮ್ಮ ದೇಶದಲ್ಲಿ ಕಾರ್ಮಿಕವರ್ಗದ ಮೇಲೆ ನಡೆಯುತ್ತಿರುವ ನಾನಾರೀತಿಯ ದಾಳಿ ದಬ್ಬಾಳಿಕೆಗಳನ್ನು ಪ್ರಸ್ತಾಪಿಸಿದ ಕಾಂ|| ಬಿ. ಟಿ. ಆರ್. ಕಳೆದ ವರ್ಷ ರಾಷ್ಟ್ರೀಯ ಭಧ್ರತಾಶಾಸನ, ತದನಂತರ ಕಾರ್ಮಿಕರ ಮುಷ್ಕರದ ಹಕ್ಕನ್ನೇ ಕಸಿದುಕೊಳ್ಳಲೆತ್ನಿಸುವ ಅಗತ್ಯ ಸೇವಾ ನಿರ್ವಹಣ ಶಾಸನ ಜಾರಿಗೆ ತಂದದ್ದನ್ನು ಉದಹರಿಸಿದರು. ಲೋಕಸಭೆಯಲ್ಲಿ ಟ್ರೇಡ್ ಯೂನಿಯನ್ ತಿದ್ದುಪಡಿ ಮಸೂದೆ, ಕೈಗಾರಿಕಾ ವಿವಾದ ತಿದ್ದುಪಡಿ ಮಸೂದೆಗಳನ್ನು ಮಂಡಿಸಿರುವುದನ್ನು. 'ಹಾಸ್ಪಿಟಲ್ಸ್ ಆ್ಯಂಡ್ ಅದರ್ ಇನ್ಸ್‌ಟಿಟ್ಯೂಷನ್' (ಸೆಟ್ಲಮೆಂಟ್ ಅಫ್ ಡಿಸ್ಪ್ಯೂಟ್) ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿರುವುದನ್ನು ತಿಳಿಸಿ ಕಾಂ|| ಬಿ. ಟಿ. ಆರ್. ಸಮಗ್ರ ಕಾರ್ಮಿಕ ವರ್ಗ ಈ ಕರಾಳ ಶಾಸನ, ಗಳ ವಿರುದ್ಧ ಐಕ್ಯಕಾರ್ಯಚರಣೆಗೆ ಮುಂದಾಗಬೇಕೆಂದು ಕರೆ ನೀಡಿದರು.

ರಾಜ್ಯದ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ ಕಾಂ| ಬಿ. ಟಿ. ಆರ್. ಬೆಂಗಳೂರು ನಗರದ ವಾತಾವರಣ ತುಂಬಾ ಆಹ್ಲಾದಕರವಾಗಿದೆಯೆಂದು ಶ್ಲಾಘಿಸುತ್ತಾ, ಆದರೆ ರಾಜಕೀಯ ವಾತಾವರಣಕ್ಕೆ ಇದು ಅನ್ವಯಿಸುವುದಿಲ್ಲ ಎಂದು ವ್ಯಂಗ್ಯವಾಡಿದರು.

ಕಾಂ| ಬಿ. ಟಿ. ಆರ್. ಮುಂದುವರೆದು ಕರ್ನಾಟಕಕ್ಕೂ ಮಹಾರಾಷ್ಟ್ರಕ್ಕೂ ಗಡಿ ವಿವಾದವಿದ್ದರೂ ಕೂಡ ಭ್ರಷ್ಟಾಚಾರ, ಸಿಮೆಂಟ್ ಹಗರಣ ಮುಂತಾದವಕ್ಕೆ ಗಡಿ ಅಡ್ಡಿ ಇಲ್ಲಯೆಂದರು. "ಅಂತುಳೆ ಪೀಡೆ" ಕರ್ನಾಟಕದಲ್ಲೂ ಹರಡಿದೆ ಎಂದು ಟೀಕಿಸಿದರು. ಇತ್ತೀಚೆಗೆ ರಾಜ್ಯ ಕಾಂಗ್ರೆ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಸುಮಾರು 3000 ಎಕರೆ ಅರಣ್ಯ ಭೂಮಿ ಕೊಟ್ಟಿರುವುದನ್ನು ಸಮರ್ಥಿಸಿಕೊಂಡ ಗುಂಡೂರಾವ್‌ರನ್ನು ಕಾಂ| ಬಿ ಟಿ. ಆರ್. ಖಂಡಿಸಿದರು.

ಸರಕಾರಿ ಕ್ಷೇತ್ರದ ಉದ್ಯಮಗಳಲ್ಲಿನ ವೇತನ ಒಪ್ಪಂದಗಳ ಅವಧಿ ಈ ವರ್ಷಾಂತ್ಯದ ವೇಳೆ ಮುಗಿಯಲಿದ್ದು ಹೊಸ ಒಪ್ಪಂದಗಳಾಗುವಾಗ ಕೇಂದ್ರ ಸರಕಾರ ವೇತನ ಏರಿಕೆಯನ್ನು ತಡೆಗಟ್ಟುವ ಉದ್ದೇಶವನ್ನು ಸ್ಪಷ್ಟಪಡಿಸಿರುವುದರಿಂದ ಈ ನೀತಿಯ ಬದಲಾವಣೆಗೆ ಐಕ್ಯ ಹೋರಾಟ ಅಗತ್ಯ ಎಂದು ಕಾಂ| ಬಿ. ಟಿ. ಆರ್. ಒತ್ತಿ ಹೇಳಿದರು.

ರಾಷ್ಟ್ರದ ನಾನಾ ಮೂಲೆಗಳಲ್ಲಿ ಬೆಳೆಯುತ್ತಿರುವ ಹೋರಾಟಗಳನ್ನು ಪ್ರಸ್ತಾಪಿಸಿದ ಕಾಂ|| ಬಿ. ಟಿ. ಆರ್. ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಸತತ ಐಕ್ಯ ಕಾರ್ಯಚರಣೆಗೆ ಮುಂದಾಗಬೇಕೆಂದು ಎಚ್ಚರಿಸಿದರು.

ಸಭೆಯ ಕೊನೆಯಲ್ಲಿ ಕಾಂ|| ಟಿ. ಎಸ್. ಅನಂತರಾಂ ಅವರು ಮಾತನಾಡುತ್ತಾ, ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ಸಭೆಯು ಯಶಸ್ವಿಗಾಗಿ ಹಗಲಿರಳೂ ದುಡಿದ ಕಾರ್ಯಕರ್ತರನ್ನು ಅಭಿನಂಧಿಸಿದರು. ಮೆರವಣಿಗೆಗೆ ಆಗಮಿಸಿದ ಹರಿಹರ ಕಿರ್ಲೋಸ್ಕರ್ ಕಾರ್ಮಿಕರಿಗೆ, ಮೈಸೂರು, ಕೋಲಾರ, ತಿಪಟೂರು, ಮೊದಲಾದ ಸ್ಥಳಗಳಿಂದ ಬಂದು ಸೇರಿದ ಕಾರ್ಮಿಕ ಬಾಂಧವರಿಗೆ, ಹಿತೈಷಿಗಳಿಗೆ ಕೃತಜ್ಞತೆ ಸಲ್ಲಿಸಿದರು.

(ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ಅಂಗೀಕರಿಸಿದ ನಿರ್ಣಯಗಳನ್ನು ಮುಂದಿನವಾರ ಪ್ರಕಟಿಸಲಾಗುವುದು.)

●

ಕರ್ನಾಟಕ ರಾಜ್ಯದಲ್ಲಿ

(2ನೇ ಪುಟದಿಂದ)

ಆರೋಪಗಳ ಸುರಿಮಳೆ. ಲಿಂಗಾಯಿತ ಕೋಮಿನಲ್ಲಿ ತೀವ್ರಗೊಳ್ಳುತ್ತಿರುವ ಅಸಮಾಧಾನ. ಹಿಂದುಳಿದ ವರ್ಗದವರೆಲ್ಲ ಬಂಗಾರಪ್ಪ-ರಾಠೋಡರೊಡನೆ ಸೇರಿಕೊಳ್ಳಬಹುದೆಂಬ ಸಂಶಯಗಳೆಲ್ಲ, ಮಂತ್ರಿ ಮಂಡಲದ ವಿಸ್ತರಣೆಗೆ ಕಾರಣ. ಅದರಲ್ಲೂ ಹಿಂದುಳಿದವರಿಗೆ ಪ್ರಾಧಾನ್ಯ ಕೊಡಲಾಗುವುದೆಂಬ ಗುಂಡೂರಾಯರ ಹೇಳಿಕೆ. ಈಗಿರುವ ವಿಧಾನ ಸಭೆ ಸದಸ್ಯರಿಗೆಲ್ಲ ಮುಂಬರುವ ಚುನಾವಣೆಯಲ್ಲಿ ಟಿಕೆಟು ಕೊಡಲಾಗುವುದೆಂದು ಗುಂಡೂರಾಯರು ಹೇಳಿದರೂ ಕೂಡ, ಗುಂಪುಗಾರಿಕೆಯಿಂದ ತುಂಬಿತುಳುಕುತ್ತಿರುವ ಕಾಂಗ್ರೆಯಲ್ಲಿ, ಹರಿಯಾಣ ಚುನಾವಣೆಯ ಅನುಭವದಿಂದ ಪಕ್ಷಾಂತರಿಗಳಿಗೆ ಟಿಕೆಟ್ ಕೊಡಬಾರದೆಂಬ ಒತ್ತಡ ಜೋರಾದರೆ ಕೊನೆ-ಳಿಗೆಯಲ್ಲಿ ಅವಾಂತರ ಉಂಟಾಗಿ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಪೆಟ್ಟು ಬೀಳಬಹುದೆಂಬ ಅಂಜಿಕೆಯಿಂದ ಅಲ್ಪ ಮತಸ್ಥರಿಗೂ, ಹಿಂದುಳಿದವರಿಗೂ ಮಂತ್ರಿ ಮಂಡಲದ ವಿಸ್ತರಣೆಯಲ್ಲಿ ಪ್ರಾಶಸ್ತ್ಯ ನೀಡಲಾಗುವುದೆಂದು ಗುಂಡೂರಾಯರು ಸಾರಿದ್ದಾರೆ. ಜನತೆಯ ದೃಷ್ಟಿಯಲ್ಲಿ ಮಂತ್ರಿ ಮಂಡಲದ ವಿಸ್ತರಣೆಯ ಅವಶ್ಯಕತೆಯಿಲ್ಲ. ರಾಜ್ಯದ ಖಜಾನೆ ಬರಡಾಗಿ ಹಲವಾರು ವರ್ಷಗಳಿಂದ ಅಭಿವೃದ್ಧಿ ಯೋಜನೆಗಳು ಪೂರ್ಣಗೊಳ್ಳದೆ ತ್ರಿಶಂಕು ಅವಸ್ಥೆಯಲ್ಲಿರುವಾಗ ಮಂತ್ರಿ ಮಂಡಲ ವಿಸ್ತರಿಸಿ ಹಣ ಪೋಲು ಮಾಡುವ ಕ್ರಮವನ್ನು ಜನತೆ ವಿರೋಧಿಸುವುದು ಅತ್ಯಗತ್ಯ. ಕಾಂಗ್ರೆಸ್ ಪಕ್ಷದ ಹಿತದ ಸಲುವಾಗಿಯೇ ಮಂತ್ರಿ ಮಂಡಲ ವಿಸ್ತರಣೆಯಾಗುವುದು ಖಂಡನೀಯ.

ಪರಿಸರ

● ಅಂತುಳೆ ಸಂಪುಟದಲ್ಲಿ ಸಚಿವರಾಗಿದ್ದ ನಾಲ್ವರು ವಾಸಿಸುವ ಸರಕಾರಿ ಬಂಗಲೆಗಳಲ್ಲಿನ ಟೆಲಿಫೋನ್ ಸಂಪರ್ಕವನ್ನು ಕಡಿದು ಹಾಕಲಾಗಿದೆ. ಕಾಂಗ್ರೆ ಪಕ್ಷದ ಶಾಸಕಾಂಗದಲ್ಲಿ ಯಾದವೀ ಕಲಹ ಪರಿಸ್ಥಿತಿ ತೋರಿದಾಗ ರಾಮರಾವ್ ಅದಿಕ್ ಅವರು ಇದನ್ನು ಪ್ರಸ್ತಾಪಿಸುತ್ತಾ ಮುಖ್ಯ ಮಂತ್ರಿಯವರ ಈ ಕ್ರಮ ನಿಜಕ್ಕೂ ಬಾಲಿಶವಾದದ್ದು ಎಂದು ಟೀಕಿಸಿದರು.

--ಸ್ಟೇಟ್ಸ್‌ಮನ್

● 1977ರಲ್ಲಿ ಪಿ. ಸಿ. ಸೇಠಿ, ಆರ್. ಕೆ. ಧಾವನ್ ಮತ್ತು ಎಸ್. ಕೆ. ಸಿಂಗ್‌ರ ನಿವಾಸಗಳ ಮೇಲೆ ಏಕಕಾಲೀನ ಸಿ.ಬಿ.ಐ. ದಾಳಿಯಿಂದ ಆರಂಭವಾದ ಪ್ರಕರಣವೊಂದರಲ್ಲಿ ಕೊನೆಯ ತೀರ್ಪು ನೀಡುತ್ತಾ ದಿಲ್ಲಿಯ ವಿಶೇಷ ನ್ಯಾಯಾಧೀಶ ಶ್ರೀ ಎಸ್. ಎಮ್. ಅಗರ್‌ವಾಲಾ ಈ ಪ್ರಕರಣದ ಉದ್ದಕ್ಕೂ ಸಿ.ಬಿ.ಐನ "ತಪ್ಪರಲಾಗ"ಗಳ ಬಗ್ಗೆ ಆಘಾತ ವ್ಯಕ್ತಪಡಿಸಿದರು. ಅಲ್ಲದೆ ಎಸ್. ಕೆ. ಸಿಂಗ್‌ರ ಪತ್ನಿ ಮತ್ತು ತಾಯಿಗೆ ನಕಲಿ ಶಸ್ತ್ರಾಸ್ತ್ರ ಲೈಸೆನ್ಸ್ ನೀಡಿದ IAS ಅಧಿಕಾರಿಗಳಿಗೆ ಛೀಮಾರಿ ಹಾಕಿದರು.

--ಇ ಎನ್.ಎಸ್. ಜು. 18

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office ;L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT.